matters. To whatever party we belong and whatever to the political reasons, we must all look into these problems in the interest of the State. This water problem has reached a crucial stage.

Sri VEERENDRA PATIL.—I do not know why some Hon. members are repeatedly asking me about my going to Delhi. Whenever it is necessary, I am prepared to go to Delhi. As State Government, I have to depend upon the Government of India on so many matters. I cannot avoid going to Delhi if it is necessary. These are matters which require serious consideration.

Sri AZEEZ SAIT.—When the letter is received day before yesterday, the Chief Minister and another delegation of members may go to Delhi for the purpose of lobbying with the Central Government.

Budget Estimates for 1970-71.

(General Discussion)

(Debate continued.)

ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಸನ್ಮಾನ್ಯ ಸಭಾಧ್ಯಕ್ಷರೇ, ಇಂದಿನ ದಿವಸ ನಮ್ಮ ಅರ್ಥಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಕೊಟ್ಟಿರತಕ್ಕ ಅಯವ್ಯಯ ಪಟ್ಟಿಯನ್ನು ನಾನು ವಿರೋಧಿಸುತ್ತಾ ಅವರ ಭಾಷಣದಲ್ಲಿ ಪ್ರಸ್ತಾಪ ಮಾಡಿರುವ ರೀತಿಯಲ್ಲಿ ಈ ಅಯವ್ಯಯ ಪಟ್ಟಿಯಲ್ಲಿ ಒದಗಿಸಿರುವ ಹಣವನ್ನು ಯಾವ ಯಾವ ರೀತಿಯಲ್ಲಿ ಈ ವರ್ಷಗಳಲ್ಲಿ ಖರ್ಚು ಮಾಡಬೇಕು ಎನ್ನುವುದನ್ನು ನಮಗೆ ಅರ್ಥವಾಗುವ ರೀತಿಯಲ್ಲಿ ತಿಳಿಸಿದ್ದಾರೆ. ಮೊಟ್ಟಮೊದಲನೆಯ ದಾಗಿ ಈ ಬಜೆಟಿನಲ್ಲಿ ಹೆಚ್ಚು ಹಣವನ್ನು ಮರಾಮತ್ತು ಇಲಾಖೆ ಮೂಲಕ ಕಾಮಗಾರಿಗಳನ್ನು ಮಾಡಿಸುವುದಕ್ಕೆ ಕೊಟ್ಟಿದ್ದಾರೆ. ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಕೆಲವೊಂದು ಅಂದಾಜುಗಳನ್ನು ಬಿಟ್ಟರೆ, ರಾಜಕೀಯ ಪ್ರಾಜೆಕ್ಟುಗಳು ಹೆಚ್ಚಾಗಿ ಕಂಡುಬರುತ್ತವೆ. ಇವುಗಳಿಗೆ ಕೊಟ್ಟ ಹಣ ಏನಿದೆಯೋ ಅದು ನಿಜವಾಗಿಯೂ ಕೂಡ ದುರ್ವ್ಯಯವಾಗುತ್ತದೆ ಎಂದು ಹೇಳಿದರೆ ತಪ್ಪಾಗಲಾರದು ರಾಮಕೃಷ್ಣ ಹೆಗಡೆಯವರು ಚಿಕ್ಕಮಗಳೂರು ಜಿಲ್ಲೆಗೆ ಬಂದಾಗ ನೋಡಿದ್ದಾರೆ. ಅಲ್ಲಿ ಕಟ್ಟುತ್ತಿರುವ ದಾಸರಹಳ್ಳಿ ಕೆರೆ ರಾಜಕೀಯ ಪ್ರಾಜೆಕ್ಟು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಮೂರು ಲಕ್ಷ ರೂಪಾಯಿಗಳಲ್ಲಿ ಆ ಕೆರೆ ನಿರ್ಮಾಣ ಮಾಡಬೇಕು ಎಂದು ಇಂಜಿನೀಯರಿಂಗ್ ಇಲಾಖೆಯವರು ತಯಾರು ಮಾಡಿದ ಅಂದಾಜು, ಆ ಕೆರೆ ರಾಜಕೀಯ ಕಂಟ್ರಾಕ್ಟುಗಳಿಗೆ ಅಂದರೆ ಶ್ರೀ ಸಿದ್ಧವೀರಪ್ಪನವರು ಹೇಳಿದಂತೆ ಕರ್ಣಾಟಕ ಟ್ರೇಡರ್ಸ್ ಎನ್ನತಕ್ಕವರಿಗೆ ಕೊಟ್ಟಿದ್ದರಿಂದ ಅವರು ಅದನ್ನು ಅವ್ಯವಸ್ಥೆ ಮಾಡಿ ಪೂರ್ಣ ಮುಗಿಸಬೇಕಾದರೆ ಹದಿಮೂರುವರೇ ಲಕ್ಷ ರೂಪಾಯಿಗಳು ಆಯಿತು. ಅದು ನೀರು ನಿಲ್ಲದ ಕೆರೆ ಎಂದು ಹೇಳಿದ್ದರೆ ತಪ್ಪಾಗಲಾರದು. ಒಂದು ತೊಟ್ಟು ನೀರೂ ಆ ಕೆರೆಯಲ್ಲಿ ಇಲ್ಲ. ಮುಂದೆ ಅಲ್ಲಿ ನೀರು ಬರುವ ಭರವಸೆಯೂ ಇಲ್ಲ. ಹದಿಮೂರೂವರೇ ಲಕ್ಷ ರೂಪಾಯಿ ಕರ್ಣಾಟಕ ಟ್ರೇಡರ್ಸ್‌ಗೆ ಕೊಟ್ಟು ರಾಜಕೀಯ ಕೆರೆಯನ್ನು ಕಟ್ಟಿದ್ದಾರೆ. ಇದರಿಂದ ಯಾವ ರೈತನಿಗೆ ಉಪಯೋಗವಾಗುತ್ತದೆ ಎಂದು ಕೇಳುತ್ತೇನೆ. ಹದಿಮೂರೂವರೆ ಲಕ್ಷ ಖರ್ಚುಮಾಡಿ ಇಲ್ಲಿ ನೀರು ನಿಲ್ಲುತ್ತದೆ ರೈತನಿಗೆ ಉಪಕಾರವಾಗುತ್ತದೆ ಎಂದು ಹೇಳಿದ ಇಂಜನೀಯರ್ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳುತ್ತೇನೆ. ಈಗಲೂ ಕೂಡ ಕೆರೆ ವಿಚಾರದಲ್ಲಿ ಸಂಬಂಧಪಟ್ಟ ಇಂಜನೀಯರುಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಈ ಕೆರೆಗೆ ಶಾಶ್ವತವಾದ ನೀರನ್ನು ಒದಗಿಸಬೇಕಾದರೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೊನ್ನಮ್ಮನ ಹಳ್ಳ ಎನ್ನುವ ಜೀವ ನದಿ ಇದೆ, ಇಲ್ಲಿಂದ ನೀರುತರುವ ಪ್ರಾಜೆಕ್ಟನ್ನು ಇಂಜನೀಯರಿಂಗ್ ಇಲಾಖೆಯವರು ತಯಾರು ಮಾಡಿ ಅದನ್ನು ಕಾರ್ಯಗತ ಮಾಡಿದರೆ, ಈ ಹದಿಮೂರೂವರೆಲಕ್ಷ ರೂಪಾಯಿಗಳನ್ನು ಖರ್ಚುಮಾಡಿರತಕ್ಕದ್ದು ಸಾರ್ಥಕವಾಗುತ್ತದೆ. ಮತ್ತೆ ಹಾಲಿ ವೃಥಾ ಹರಿದು ಹೋಗುತ್ತಿರುವ ಹೊನ್ನಮ್ಮನ ಹಳ್ಳದ

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

ನೀರು ವೇದಾ ಬೇಸಿನ್ ಸೇರುತ್ತದೆ ಎಂದು ಹೇಳುತ್ತೇನೆ. ಹೊನ್ನಮ್ಮನ ಹಳ್ಳ ಪ್ರಾಜೆಕ್ಟ್ ನಿರ್ಮಾಣ ಮಾಡದೆ ಇರುವುದರಿಂದ ಈ ವಾರಿಕಣಿವೆ ಕೆರೆ ಏನು ಇದೆಯೋ ಆ ಕೆರೆ ಕೆಳಭಾಗದಲ್ಲಿ ಇರುವ ಕೊಟ್ಯಾಂತರ ರೂಪಾಯಿ ಬೆಲೆಬಾಳುವ ಅಡಿಕೆ ತೋಟಗಳು ಒಣಗಿ ಹೋಗಿ ಅಲ್ಲಿರುವ ಅಡಕೆ ತೋಟದ ಮಾಲೀಕರು ಹಿರಿಯೂರು ಗ್ರಾಮ ಬಿಟ್ಟು ಹೊರಕ್ಕೆ ಹೋಗುತ್ತಿದ್ದಾರೆ. ಆದ್ದರಿಂದ ಈ ಪ್ರಾಜೆಕ್ಟನ್ನು ಮಾಡುವುದರಿಂದ ಅಂತಹವರಿಗೆ ಉಪಕಾರಮಾಡಿ ಎಂದು ಹೇಳುತ್ತೇನೆ. ಚಿಕ್ಕಮಗಳೂರು ಜಿಲ್ಲೆ ಗುಡ್ಡ ಪ್ರದೇಶವಾಗಿದೆ. ಅಲ್ಲಿಗೆ ಹೋಗುವ ರಸ್ತೆ ವ್ಯವಸ್ಥೆ ಚೆನ್ನಾಗಿಲ್ಲ. ಅದನ್ನು ಉತ್ತಮ ರೀತಿಯಲ್ಲಿ ಒದಗಿಸಬೇಕೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಹಣದ ಕೊರತೆ ಮಾತನ್ನು ಹೇಳುತ್ತಿದ್ದಾರೆ. ಆದರೆ ವರ್ಷೇ ವರ್ಷೇ ನಮ್ಮ ಮುಂದೆ ಇಟ್ಟಿರತಕ್ಕ ಆಯವ್ಯಯ ಪಟ್ಟಿ ಏನಿದೆಯೋ ಅದು ಜನಸಾಮಾನ್ಯರ ಮೇಲೆ ಹೊರೆಯನ್ನು ಹಾಕುವುದಾಗಿದೆಯೇ ವಿನಹ ಜನಸಾಮಾನ್ಯರ ಮೇಲೆ ಭಾರವನ್ನು ಕಡಿಮೆ ಮಾಡಿರುವುದು ಯಾವುದೂ ನನಗಂತೂ ಕಂಡು ಬರುವುದಿಲ್ಲ. ನಾವು ಕಳೆದ 22 ವರ್ಷಗಳಿಂದ ಸೋಷಿಯಲಿಜಂ ಎಂದು ಹೇಳಿಕೊಂಡು ಜನ ಸಾಮಾನ್ಯರ ಹಿತ ಸಾಧನೆ ಆಗದೆ ಶೋಷಣೆ ಆಗುವ ಬಾಬುಗಳನ್ನು ಜಾರಿಗೆ ತಂದು ಅದರಿಂದ ಜನರಿಗೆ ಹಾನಿ ಆಗಿದೆ. ಅದು ಯಾವುದು ಎಂದರೆ ಲಾಟರಿ ಮತ್ತು ಬಾಟಲ್. ಇದು ನೀವು ತಂದಿರತಕ್ಕ ಸೋಷಿಯಲಿಜಂ. ಇದನ್ನು ಗಾಂಧೀಜಿಯವರು ಹೇಳಿರಲಿಲ್ಲ. ಗಾಂಧಿಜೀಯವರ ತತ್ವಕ್ಕೆ ತಿಲಾಂಜಲಿ ಬಿಟ್ಟಿದ್ದೀರಿ. ಏತಕ್ಕಾಗಿ ನಿಮಗೆ ಇಂತಹ ಒಂದು ಕೊರತೆ ಬಂದಿದೆ ಎಂದು ನಾನು ತಮ್ಮಲ್ಲಿ ಕೇಳುವುದಕ್ಕೆ ಇಷ್ಟ ಪಡುತ್ತೇನೆ. ಅದು ಗಾಂಧಿ ಅವರ ತಪ್ಪ ಎಂದು ಹೇಳುತ್ತೇನೆ. ರೈತರಿಗೆ ಅಗತ್ಯವಾದ ಎಲ್ಲಾ ವಸ್ತುಗಳ ಬೆಲೆಯನ್ನು ಕೂಡ ಜಾಸ್ತಿಮಾಡಿದ್ದೀರಿ. ಈ ರೈತನಿಗಾಗಿ ಏನು ಟ್ರಾಕ್ಟರುಗಳನ್ನು ಒದಗಿಸುತ್ತೀರೋ ಮತ್ತು ರೈತನಿಗೆ ಬೇಕಾಗಿರತಕ್ಕ ಯಂತ್ರೋಪಕರಣಗಳನ್ನು ಒದಗಿಸುತ್ತಿದ್ದೀರೋ ಅದಕ್ಕೆ ಬೇಕಾದ ಡೀಸೆಲ್ ಆಯಿಲ್ ಮತ್ತು ಸೀಮೆ ಎಣ್ಣೆಗೆ ಕೂಡ ಬೆಲೆ ಜಾಸ್ತಿಮಾಡಿದ್ದೀರಿ. ಇದನ್ನು ಮಾಡಿರತಕ್ಕದ್ದು ರೈತನಿಗೆ ಉಪಕಾರಮಾಡಿದಂತಾಗುತ್ತದೆಯೇ ?

ಆಹಾರ ಇಲಾಖೆ ಏಕೆ ಇಟ್ಟುಕೊಂಡಿದ್ದೀರೋ ಅರ್ಥವಾಗುವುದಿಲ್ಲ. ಡೀ ಕಂಟ್ರೋಲ್ ಮಾಡಿ ಈ ಇಲಾಖೆಯನ್ನೂ ಕೂಡ ತೆಗೆದು ಹಾಕಬೇಕು, ಆಹಾರ ಮಂತ್ರಿಗಳ ಅವಶ್ಯಕತೆ ಇಲ್ಲ ಎಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಆಹಾರ ಮಂತ್ರಿಗಳು ರಾಜೀನಾಮೆಕೊಟ್ಟರೆ ಬಹಳ ಸಂತೋಷ, ಇದರಿಂದ ಆಹಾರ ಇಲಾಖೆ ರದ್ದು ಮಾಡುವುದರಿಂದ ದೇಶಕ್ಕೆ ಹತ್ತಾರು ಕೋಟಿ ರೂಪಾಯಿ ಉಳಿಯುತ್ತದೆ ಎಂಬ ಮಾತನ್ನು ಹೇಳುತ್ತೇನೆ.

5-30 P. M.

ಚಿಕ್ಕಮಗಳೂರು ಕಾಡುಗಳಿಂದ ಕೂಡಿದ ಪ್ರದೇಶ, ಕಾಫಿ ಬೆಳೆಯತಕ್ಕ ಶ್ರೇಷ್ಠವಾದ ಸ್ಥಳ. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಮರಗಳನ್ನು ಕಡಿದು ಹೊರಗಡೆಗೆ ಸಾಗಿಸುವುದರಿಂದ ಸಕಾಲಕ್ಕೆ ಮಳೆ ಬಾರದೆ ತೊಂದರೆಯಾಗಿದೆ. ಅವರು ಮರಗಳನ್ನು ಕಡಿಯುವುದು ಬೇಡ ಅಂತ ಅನ್ನುವುದಿಲ್ಲ, ಎಷ್ಟು ಮರಗಳನ್ನು ಕಡಿಯುತ್ತಾರೋ ಅಷ್ಟು ಮರಗಳನ್ನು ಬೆಳೆಸತಕ್ಕದ್ದನ್ನು ಮರೆತಿದ್ದಾರೆ. ಆದ್ದರಿಂದ ವನಸಂಪತ್ತನ್ನು ಬೆಳೆಸಬೇಕೆಂದು ಸಲಹೆ ಮಾಡುತ್ತೇನೆ. ಕಾಫಿ ಬೆಳೆಗಾರರಿಗೆ ಮಳೆ ಬಾರದೆ ಬಹಳ ಹೆಚ್ಚಿನ ತೊಂದರೆಯಾಗಿದೆ.

ಅಧ್ಯಕ್ಷರು.—ವೇಳೆ ಆಯಿತು ದಯವಿಟ್ಟು ಮುಗಿಸಬೇಕು.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸ್ವಲ್ಪ ಕಾಲಾವಕಾಶ ಕೊಡಿ ಸ್ವಾಮಿ, ಇಷ್ಟು ಆಗ್ರಹ ಮಾಡಬೇಡಿ, ಜಾಗ್ರತೆ ಮುಗಿಸುತ್ತೇನೆ. ವಿದ್ಯುತ್ ಪೂರೈಕೆ ವಿಷಯ ಹೇಳಿದ್ದಾರೆ, ಇನ್ನೂ ಬಹಳ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಲ್ಲ, ಅದನ್ನು ಒದಗಿಸಬೇಕೆಂದು ಹೇಳುತ್ತೇನೆ. ಈಗ ಖರ್ಚಾಗುತ್ತಾ ಇರತಕ್ಕ ಹಣವನ್ನು ಯಾವ ರೀತಿ ಮಿತವ್ಯಯ ಮಾಡಬೇಕೆಂಬುದನ್ನು ಮಾನ್ಯ ಮಂತ್ರಿಗಳು ಪ್ರಸ್ತಾಪ ಮಾಡಿಲ್ಲ. ಈಗ ಸರ್ಕಾರ ನಡೆಸುತ್ತಾ ಇರುವುದು ಅಧಿಕಾರಿಗಳ ಸಂಬಳಕ್ಕಾಗಿ, ಮಂತ್ರಿಗಳ ಖರ್ಚಿಗಾಗಿ ನಡೆಯುತ್ತಾ ಇದೆ ಎಂದು ತಪ್ಪಾಗಲಿಕ್ಕಿಲ್ಲ. ಡಿವಿಜನಲ್ ಕಮೀಷನರನ್ನು ತಗೆದುಹಾಕಿ, ಬಿ.ಡಿ. ಓ. ಗಳನ್ನು ತೆಗೆಯಿರಿ, ಮಂತ್ರಿಗಳು 29 ಜನ ಇದ್ದಾರೆ ಅವರನ್ನು ಕಡಿಮೆ ಮಾಡಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ಮಾತು. ಪಟ್ಟಣಗಳ ಬೆಳವಣಿಗೆ ಚೆನ್ನಾಗಿ ಆಗುತ್ತಾ ಇದೆ. ಅದೇ ರೀತಿ ಗ್ರಾಮಾಂತರಗಳ ಬೆಳವಣಿಗೆ ಆಗುತ್ತಾ ಇಲ್ಲ. ಅನೇಕ ಕಡೆ ಗ್ರಾಮಾಂತರಗಳಲ್ಲಿ ರಸ್ತೆ ಇಲ್ಲ,

ಪ್ರೊಟೆಕ್ಟೆಡ್ ವಾಟರ್ ಸಪ್ಲೈ ಇಲ್ಲ, ಸ್ಕೂಲುಗಳು ಇಲ್ಲ, ಇಂತಹ ಪರಿಸ್ಥಿತಿ ಇದೆ. ಪಟ್ಟಣಗಳ ಬೆಳವಣಿಗೆಯನ್ನು ಕಡಿಮೆ ಮಾಡಿ ಹಳ್ಳಿಗಳ ಬೆಳವಣಿಗೆಯನ್ನು ಮಾಡುವುದಕ್ಕೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಹೇಳುತ್ತೇನೆ.

ವಿದ್ಯಾಭ್ಯಾಸದ ವಿಚಾರವಾಗಿ ಹೇಳುತ್ತಾ ಅನೇಕ ಸ್ಕೂಲುಗಳನ್ನು ಕಾಲೇಜುಗಳನ್ನು ತೆರೆದಿದ್ದೇವೆ ಎಂದು ಹೇಳಿದ್ದಾರೆ. ಪ್ರೈಮರಿ ಶಾಲೆಯಿಂದ ಹಿಡಿದು ಕಾಲೇಜಿನ ವುಟ್ಟ ದವರೆಗೂ ಎಲ್ಲರಿಗೂ ಫ್ರೀ ಎಜ್ಯುಕೇಷನ್ ಕೊಡಬೇಕು. ಹಣವಂತರಿದ್ದರೆ ಅವರಿಂದ ಟ್ಯಾಕ್ಸ್ ಮುಂಖಾಂತರ ವಸೂಲು ಮಾಡುವುದು ಯೋಗ್ಯ. ದೊಡ್ಡ ಮನುಷ್ಯರ ಮಗನಾಗಲಿ, ಬಡವರ ಮಗನಾಗಲಿ ಕಾಲೇಜು ವ್ಯಾಸಂಗದವರೆಗೂ ಫ್ರೀ ಎಜ್ಯುಕೇಷನ್ ಕೊಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆಮೇಲೆ ಗ್ರಾಮಾಂತರ ಹೌಸಿಂಗ್ ಸ್ಕೀಂ ಇದೆ. ಅದನ್ನು ಜಾರಿಗೆ ತಂದು ಅನುಕೂಲ ಮಾಡಿಕೊಡಬೇಕು ಎಂದು ಹೇಳಿ ನಾನು ಮಾತನಾಡಲು ಹೆಚ್ಚಿನ ರೀತಿಯಲ್ಲಿ ಕಾಲಾವಕಾಶ ಕೊಟ್ಟಿರುವುದಕ್ಕಾಗಿ ಅಧ್ಯಕ್ಷರಿಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಬಿ. ಎಲ್. ನಾರಾಯಸ್ವಾಮಿ (ಶ್ರೀನಿವಾಸಪುರ).– ಸನ್ಮಾನ್ಯ ಸಭಾಪತಿಗಳೇ, ಸಮಾಜ ವಾದಿ ಸಮಾಜ ಸ್ಥಾಪನೆಯ ದಿಶೆಯಲ್ಲಿ ಎಷ್ಟು ದೂರ ಮುಂದುವರೆದಿದ್ದಾರೆಂದು ನೋಡಿದರೆ ಈ ಆಯವ್ಯಯ ಪಟ್ಟಿ ನಿರಾಶಾದಾಯಕವಾಗಿದೆ. ಸಮಾಜವಾದಿ ಸಮಾಜದ ರೂಪುರೇಖೆಗಳೇನೆಂಬು ದನ್ನು ಇಂಡಿಕೇಟಿನವರಾಗಲೀ ಅಥವ ಸಿಂಡಿಕೇಟಿನವರಾಗಲೀ ವಿವರಿಸಿಲ್ಲ. ನಾನು ಯೋಚನೆ ಮಾಡುವುದಾದರೆ ನಮ್ಮ ಸಮಾಜದಲ್ಲಿ ಎಲ್ಲರೂ ಕೂಡ ಒಂದೇ ವಿಧವಾದ ಸುಖ, ಸೌಕರ್ಯ ಅನುಭವಿಸಬೇಕು; ಆ ರೀತಿ ಮಾಡುವುದು ಸಮಾಜವಾದಿ ಸಮಾಜದ ಗುರಿ ಎಂದು ಹೇಳುವು ದಾದರೆ ಅದು ನಿಜವಾಗಿಯೂ ಸಾಧ್ಯವಾಗಲಾರದು. ಆದರೆ ಒಂದು ಪರಿಮಿತಿಯಲ್ಲಿ ಜೀವನದ ಸುಖ ಅನುಭವಿಸುವಂತೆ ಮತ್ತು ಹೆಚ್ಚಿನ ರೀತಿಯಲ್ಲಿ ಉನ್ನತಿಗೆ ಹೋಗದಂತೆ ಕನಿಷ್ಠ ಮತ್ತು ಗರಿಷ್ಠ ಮಿತಿ ಒಳಗೊಂಡ ಸಮಾಜ ರಚಿಸಬೇಕು ಎಂಬುದು ನನ್ನ ಅಭಿಪ್ರಾಯ. ಆ ದೃಷ್ಟಿಯಿಂದ ನೋಡುವುದಾದರೆ ಅರ್ಥಿಕ ಸಚಿವರು ಕಳೆದ ಒಂದು ದಶಕದ ಆಯವ್ಯಯವನ್ನೆಲ್ಲಾ ಅವಲೋಕಿಸಿ ದ್ದಾರೆ. ಅದರಿಂದ ಬಡವ ತುಂಬಾ ಬಡವನೂ ಶ್ರೀಮಂತ ಮಿತಿ ಇಲ್ಲದೆ ಏರುತ್ತಿರುವುದೂ ವ್ಯಕ್ತ ಪಡುವುದು. ಆದರೆ ಈ ವರ್ಷದ ಬಜೆಟ್ಟಿನಲ್ಲಿ ಹಿರಿಯ ಆಸೆ ಮನಸ್ಸಿನಲ್ಲಿಟ್ಟು ಮುಂದಿನ ದಶಕ ದಲ್ಲೇನು ಸಾಧಿಸಬಹುದು ಎಂಬುದನ್ನು ಹೇಳಿದ್ದಾರೆ. ದೀನದಲಿತರು, ಹರಿಜನ ಗಿರಿಜನರು, ಹಿಂದುಳಿದ ವಿದ್ಯಾರ್ಥಿಗಳು ಮುಂತಾದವರಿಗೆ ಉಚಿತ ಭೋಜನ, ವಿದ್ಯಾರ್ಥಿವೇತನ ಕೊಡುವ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳುವುದು ಒಂದು ಸಂತೋಷಪಡುವ ಅಂಶ. ಜೊತೆಗೆ ವೃದ್ಧಾಪ್ಯ ವೇತನವನ್ನು 15 ರೂಪಾಯಿಗಳಿಂದ 25 ರೂಪಾಯಿಗಳಿಗೆ ಹೆಚ್ಚಿಸಿರುವುದೂ ಸಂತೋಷದ ವಿಚಾರ, ಅದಕ್ಕಾಗಿ ಅಭಿನಂದಿಸುತ್ತೇನೆ. ಹಳ್ಳಿಗಾಡಿನಲ್ಲಿರುವ ದೀನದಲಿತರು, ಕಾರ್ಮಿಕರು, ವ್ಯವಸಾಯದ ಕೂಲಿಗಾರರು ಮುಂತಾದವರು ಏನಿದ್ದಾರೆ ಅವರ ಸಮಸ್ಯೆ ಬಹಳ ಕ್ಲಿಷ್ಟತರವಾಗಿದೆ. ಸ್ವಾತಂತ್ರ್ಯ ಬಂದು 22 ವರ್ಷವಾದರೂ ಅವರ ವಿಚಾರದಲ್ಲಿ ಸರಕಾರ ಈವರೆಗೆ ಯಾವ ಕಾರ್ಯ ಕ್ರಮವನ್ನೂ ಕೈಕೊಂಡಿಲ್ಲ. ಇದನ್ನು ಮನನೊಂದು ಹೇಳಬೇಕಾಗಿದೆ. ಈಗಲೇ ಅಲ್ಲ, ಅವಕಾಶ ಸಿಕ್ಕಿದಾಗಲೆಲ್ಲಾ ಈ ವಿಚಾರವನ್ನು ಹೇಳುತ್ತಿದ್ದೇನೆ. ಸರಕಾರಕ್ಕೂ ಈ ವಿಚಾರ ಗೊತ್ತಿದೆ, ಈ ಸಮಸ್ಯೆ ಕ್ಲಿಷ್ಟತರವಾದುದು, ಆದುದರಿಂದ ಕೈಹಾಕಬಾರದು, ಬಡವರು ಕೂಲಿಗಾರರು ಹಾಗೆಯೇ ಇರಲಿ ಎಂದು ಅವರು ಸುಮ್ಮನಿದ್ದು ಅಕಮ್ಯ ಅಪರಾಧ ಮಾಡಿದ್ದಾರೆ.

ಕಾರ್ಮಿಕ ಮಂತ್ರಿಗಳು ಬಡ ಕುಟುಂಬದಿಂದ ಬಂದಿದ್ದಾರೆ, ಕೂಲಿಕಾರರ ಕಷ್ಟ ಅವರಿಗೆ ಗೊತ್ತಿದೆ, ಅವರು ದೊಡ್ಡ ಶ್ರೀಮಂತರಲ್ಲ, ಅವರಿಂದ ಕೂಲಿಗಾರರಿಗೆ ಒಳ್ಳೆಯದಾಗುವುದು ಎಂದು ನಾನು ಭಾವಿಸಿದ್ದೆ. ಇರುವ ಕಷ್ಟವನ್ನು ಅವರ ಗಮನಕ್ಕೆ ತಂದರೂ ಕೂಡ ಈ ಸಮಸ್ಯೆಯ ಕಷ್ಟವನ್ನು ನೋಡಿ ಇದನ್ನು ಹಾಗೆಯೇ ಬಿಟ್ಟರು. ಇದು ಸರಿಯಲ್ಲ ಎಂದು ವಿಷಾದ ದಿಂದ ಹೇಳಬೇಕಾಗಿದೆ. ಮಂತ್ರಿಗಳು ದೊಡ್ಡ ದೊಡ್ಡ ಪಟ್ಟಣಗಳು, ಬೆಂಗಳೂರು ಮುಂತಾದ ನಗರಗಳನ್ನು ನೋಡಿ ಸಂತೋಷಪಟ್ಟರೆ ಸಾಲದು, ದೊಡ್ಡ ದೊಡ್ಡ ನೀರಾವರಿ ಕಾಂಗಾರಿ ಮಾಡಿದ್ದಾರೆ, ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸಿದ್ದಾರೆ, ಇದೇ ರೀತಿಯಲ್ಲಿ ಪ್ರಜೆಗಳಿಗೆ ಅಪ್ರತ್ಯಕ್ಷವಾಗಿ ಅನುಕೂಲವಾಡಿದ್ದಾರೆ, ಅದನ್ನು ಒಪ್ಪೋಣ. ಇದರ ಜೊತೆಗೆ ದೀನದಲಿತರಿಗೆ, ದುರ್ಬಲರಿಗೆ, ಸ್ವಶಕ್ತಿಯಿಂದ ಸಂಪಾದನೆ ಮಾಡಲು ಶಕ್ತಿ ಇಲ್ಲದಿರುವವರೆಗೆ, ಹೆಚ್ಚು ಗಮನ ಕೊಟ್ಟು ಅವರು ಕನಿಷ್ಠ ಜೀವನವನ್ನಾದರೂ ನಡೆಸಲು ಅವಕಾಶವಾಗುವಂತೆ ಬೇಕಾದ ನೆರವು ನೀಡಬೇಕಾದ್ದು ಸರಕಾರದ ಕರ್ತವ್ಯ. ಆ ದಿಶೆಯಲ್ಲಿ ಏನು ಮಾಡಿದ್ದಾರೆಂದು ನೋಡಿದರೆ ಏನೂ

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಇಲ್ಲ. ಸಚಿವರು ತುಕೋಲ್ ವರದಿಗೆ ಸಂಬಂಧಪಟ್ಟಂತೆ ಚಿನ್ನದಂಥ ಮಾತುಗಳನ್ನು ಹೇಳಿದ್ದಾರೆ, ಕೇವಲ ಸೇಕಡ ಒಂದರಷ್ಟಿರುವ ನೌಕರರ ಕಡೆ ಗಮನ ಕೊಡುವಾಗ ಗ್ರಾಮಾಂತರಗಳಲ್ಲಿರುವ ಬಡವರು, ಕೂಲಿಕಾರರು ಮುಂತಾದವರು ಏನಿದ್ದಾರೆ ಅವರ ಕಡೆ ಕೂಡ ಗಮನ ಕೊಡಬೇಕಾದ್ದು ಅವಶ್ಯಕ. ಆದರೆ ಈ ಸಲದ ಆಯವ್ಯಯಪಟ್ಟಿಯಲ್ಲಿ ಅದಕ್ಕೇನೂ ಕಾರ್ಯಕ್ರಮವಿಲ್ಲ. ಇದರಿಂದ ಆಸೆ ನಿರಾಸೆಯಾಗಿದೆ. ಇಂದು ಬಡವರು ಹೆಚ್ಚಾಗಿದ್ದಾರೆ, ಭಾರತದೇಶ ಬಡತನದ ದೇಶ, ಹಳ್ಳಿಗಾಡುಗಳಲ್ಲಿರುವವರು ಮಾನವರೇ ಆದರೂ ಮಾನವೀಯತೆಯ ದೃಷ್ಟಿಯಿಂದ ನೋಡಿದರೆ ಅವರು ಒಂದು ಜನಾಂಗವೆಂದು ಹೇಳುವುದಕ್ಕಾಗುವುದಿಲ್ಲ. ಇದಕ್ಕಿಂತ ಶೋಚನೀಯವಾದ ವಿಷಯ ಬೇರೇನಿದೆ? ಹಳ್ಳಿಗಳಲ್ಲಿರುವ ಜನರಿಗೂ ವಿದ್ಯಾಭ್ಯಾಸ ಬೇಕು, ಆರೋಗ್ಯಬೇಕು, ದಿನಕ್ಕೆ ಒಂದೆರಡು ರೂಪಾಯಿ ಕೂಲಿ ಅವರಿಗೆ ದೊರೆತರೆ ಅದು ಒಬ್ಬನಿಗೆ ಸಾಲದು. ಹಾಗಿರುವುದರಲ್ಲಿ ಅವರು ಹೇಗೆ ತಮ್ಮ ಕುಟುಂಬವನ್ನು ಪೋಷಣೆ ಮಾಡಬಲ್ಲರು? ಬಟ್ಟೆಬರೆ, ವಿದ್ಯಾಭ್ಯಾಸ, ಆರೋಗ್ಯ ಸೌಕರ್ಯ ತಮ್ಮ ಕುಟುಂಬದವರಿಗೆ ಹೇಗೆ ಒದಗಿಸಬಲ್ಲರು? ಇಂದಿನ ಮಕ್ಕಳೇ ಮುಂದಿನ ಜನಾಂಗ. ಹಳ್ಳಿಗರು ಬಹಳ ದುರವಸ್ಥೆಯಲ್ಲಿದ್ದಾರೆ. ಹೀಗಿರಬೇಕು, ಹಾಗಿರಬೇಕು ಎಂದು ದೊಡ್ಡ ಭಾಷಣ ಮಾಡಿದರೆ ಸಾಲದು. ಭಾವಿ ಜನಾಂಗವನ್ನು ಯಾವ ರೀತಿ ತಯಾರುಮಾಡುತ್ತಿದ್ದೀರಿ? ಆ ಕಡೆ ದೃಷ್ಟಿ ಇದೆಯೇ? ಸೋಷಿಯಲ್ ವೆಲ್‌ಫೇರ್ ಇಲಾಖೆಯವರು ಬಾಲವಾಡಿಗಳನ್ನು ತೆರೆದಿದ್ದಾರೆಂದು ಹೇಳಬಹುದು, ಅದು ಸ್ಯಾಂಪಲ್. ಸಮಾಜವಾದೀ ಸಮಾಜ ರಚಿಸುತ್ತೇವೆಂದು ಹೇಳುವಾಗ ಹಳ್ಳಿಗಳಲ್ಲಿ ಬಾಲವಾಡಿ ಸ್ಥಾಪಿಸಿದರೆ ಎಲ್ಲರಿಗೂ ಅನುಕೂಲವಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಅದು ಗೊತ್ತಿದ್ದರೂ ಬೇಕಾದನ್ನು ಮಾಡಲು ಮನಸ್ಸಿಲ್ಲ. ಅದಕ್ಕೇನು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಸರಕಾರದ ನೌಕರಿಯಲ್ಲಿದ್ದು ಕನಿಷ್ಟ ಸೇವೆ ಮಾಡುವವರಿಗೆ ಕನಿಷ್ಟ 150 ರೂಪಾಯಿ ಸಂಬಳ ಇರಬೇಕು, ಅಷ್ಟು ಅವಶ್ಯಕ ಎಂದು ಹೇಳುತ್ತಾರೆ ಮತ್ತು ಅದರ ಜೊತೆಗೆ ಪೆನ್‌ಷನ್ ಉಂಟು, ಉಚಿತವಾಗಿ ನೌಕರರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಸೌಕರ್ಯವಿದೆ, ಉಚಿತ ವೈದ್ಯಕೀಯ ಸಹಾಯವಿದೆ. ಅದೇ ಗ್ರಾಮಾಂತರಗಳಲ್ಲಿರುವ ಕೂಲಿಕಾರರು ಮತ್ತು ಬಡವರಿಗೆ ಈ ಸೌಕರ್ಯಗಳು ಯಾವುವೂ ಇಲ್ಲದೆ ಅವರ ಪರಿಸ್ಥಿತಿ ಕಠಿಣವಾಗಿದೆ. ಅವರಿಗೆ ಬೇಕಾದ ಸೌಕರ್ಯ ಒಂದೆರಡು ದಿವಸಗಳಲ್ಲಾಗಲಿ ಒಂದೆರಡು ವರ್ಷಗಳಲ್ಲಾಗಲಿ ಒದಗಿಸಲು ಸಾಧ್ಯವಾಗುವುದಿಲ್ಲ. ಇದನ್ನು ದೀರ್ಘವಾಗಿ ಯೋಚನೆ ಮಾಡಬೇಕಾಗಿದೆ. ವ್ಯವಸಾಯದ ವಿಚಾರ ತೆಗೆದುಕೊಂಡರೆ ವ್ಯವಸಾಯಗಾರರು, ವ್ಯವಸಾಯದಲ್ಲಿ ನಿರತರಾಗಿರುವ ಕೂಲಿಯವರು ಮತ್ತು ಸರಕಾರದವರಿಗೆ ಪರಸ್ಪರ ಸಂಬಂಧವಿದೆ. ವ್ಯವಸಾಯದಲ್ಲಿ ತೊಡಗಿರುವ ಕಷ್ಟಜೀವಿಗಳ ಸಮಸ್ಯೆ ಮತ್ತು ಸಂಕಟವನ್ನು ಬಗೆಹರಿಸುವುದು ಕಷ್ಟ. ಅದನ್ನು ನೋಡಿದರೆ ದಿಗ್ಭ್ರಮೆಯಾಗಬಹುದು. ಅವರಿಗೇನು ಸಂಬಳ ಕೊಡಬೇಕು? ಸರಕಾರಿ ನೌಕರಿಯಲ್ಲಿ ಒಬ್ಬ ಕನಿಷ್ಠ ಸೇವಕನಿಗೆ ದೊರೆಯುವ ಸಂಬಳ ಮತ್ತು ಸೌಕರ್ಯ ಹಳ್ಳಿಗಾಡು ಗಳಲ್ಲಿ ಕಷ್ಟಪಡುವವರೂ ಪಡೆಯಬೇಕು, ದಿನಕ್ಕೆ 8 ರೂಪಾಯಿಯಾದರೂ ಕೂಲಿ ಕೊಡಬೇಕು. ಆ ರೀತಿ ಕೊಟ್ಟರೆ ದಿನಕ್ಕೆ ಎಷ್ಟು ಖರ್ಚು ಬರುತ್ತದೆ, ಹೇಗೆ ಒದಗಿಸಲು ಸಾಧ್ಯ ಎಂದು ಕೇಳಬಹುದು. ಇಂದು ಸಮಾಜಕ್ಕೆ ದುಡಿಯುವ ಒಬ್ಬ ಮಾನವನಿಗಾಗಿ ಹೆಚ್ಚು ಖರ್ಚನ್ನು ವಹಿಸುವ ಶಕ್ತಿಯಿಲ್ಲವೆಂದರೆ ಹೇಗೆ? ಅವರು ಮೃಗಗಳಂತೆ, ನರಿಗಳಂತೆ ಇರಲಿ, ನಾವು ಸುಖವಾಗಿರೋಣ ಎಂದು ಹೇಳಿದರೆ ಸಮಾಜ ಉಳಿಯುವುದಿಲ್ಲ.

ದೇಶದ ಇತಿಹಾಸದಲ್ಲಿ ಏನೇನು ನಡೆಯುತ್ತಿದೆ, ನಕ್ಸಲ್‌ಬಾರಿಯಲ್ಲಿ ಏನಾಯಿತು, ಬಂಗಾಳದಲ್ಲಿ ಏನಾಯಿತು ಎನ್ನುವುದನ್ನು ಯೋಚನೆ ಮಾಡಬೇಕು. ಬಡವನ ಸ್ಮರಣೆಗೂ ಕೂಡ ಒಂದು ಮಿತಿ ಇದೆ. ದೀರ್ಘಕಾಲ ಕಾದು ನೋಡಬಾರದು, ಪರೀಕ್ಷೆ ಮಾಡಬಾರದು. ಮನುಷ್ಯ ಕಷ್ಟಕ್ಕೆ, ನೋವಿಗೆ ಸಿಕ್ಕಿದಾಗ ಯಾವುದಕ್ಕೂ ಬೇಕಾದರೂ ಸಿದ್ಧನಾಗುತ್ತಾನೆ. ಪೇಟೆಯಲ್ಲಿ ಮತ್ತು ಪಟ್ಟಣಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಐಕಮತ್ಯದಿಂದ ಇದ್ದಾರೆ, ಒಗ್ಗಟ್ಟಾಗಿದ್ದಾರೆ, ಮೆರವಣಿಗೆ ಮಾಡುತ್ತಾರೆ, ಮುಷ್ಕರ ಹೂಡುತ್ತಾರೆ, ಹೆಚ್ಚಿಗೆ ಮಾತನಾಡಿದರೆ ಕಲ್ಲು ಹೊಡೆಯುತ್ತಾರೆ. ಬೆಂಕಿ ಹಚ್ಚುತ್ತಾರೆ. ಸರ್ಕಾರ ಇಂಥದಕ್ಕೆ ಬಗ್ಗುತ್ತದೆ. ನಮ್ಮ ಸರ್ಕಾರ ಮಾತ್ರವಲ್ಲ, ಕೇಂದ್ರ ಸರ್ಕಾರವೂ ಹೀಗೆಯೇ ಇದೆ. ಕೇಂದ್ರ ಸರ್ಕಾರದ ಇತಿಹಾಸದಲ್ಲಿ ಚಳುವಳಿ ಮುಂತಾದುವು ನಡೆಯದೆ ಇದ್ದರೆ ಯಾವ ಸುಧಾರಣೆಯೂ ಕೂಡ ಆಗಿಲ್ಲ, ಇನ್ನು ಮುಂದೂ ಆಗಲಾರದು ಎಂದು ನಾನು ಅಂದುಕೊಂಡಿದ್ದೇನೆ. ಇಂಥ ಪರಿಸ್ಥಿತಿಯಲ್ಲಿ ನಮ್ಮ ಸರ್ಕಾರವನ್ನು ನಾನು ಬಹಳ ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇನೆ, ಮಾನ್ಯ ಅರ್ಥ ಸಚಿವರು ನಿಜವಾಗಿಯೂ ಕೂಡ ವಾಸ್ತವಾಂಶಗಳನ್ನು ಚೆನ್ನಾಗಿ ಅರಿತು, ಅದಕ್ಕೆ ನಿವಾರಣೆಯನ್ನು ಹುಡುಕತಕ್ಕ ಶಕ್ತಿಯನ್ನು ಹೊಂದಿದ್ದಾರೆ. ಈ ಸಂಬಂಧದಲ್ಲಿ ನನ್ನ ಸಲಹೆ ಏನೆಂದರೆ, ಒಂದು ತಜ್ಞರ ಸಮಿತಿಯನ್ನು ರಚಿಸಿ, ಅದರ ವರದಿಯನ್ನು ತೆಗೆದುಕೊಂಡು ಮುಂದೆ

ಹೆಜ್ಜೆ ಇಡಿ, ಹಳ್ಳಿಗಾಡಿನಲ್ಲಿರುವ ವ್ಯವಸಾಯ ಕಾರ್ಮಿಕರು ಮತ್ತು ಇತರರಿಗೆ ಅನುಕೂಲ ಮಾಡಿಕೊಡಿ. ಮಹಾತ್ಮ ಗಾಂಧಿಯವರು ಏನನ್ನು ಹೇಳುತ್ತಿದ್ದರೋ ಅದನ್ನು ಕಾರ್ಯ ರೂಪಕ್ಕೆ ತಂದಾಗುವುದಲ್ಲದೆ, ಮಹಾತ್ಮ ಗಾಂಧಿಯವರ ಆತ್ಮಕ್ಕೂ ಸಂತೋಷವಾಗುತ್ತದೆ. ಆದ್ದರಿಂದ ಬಹಳ ತುರ್ತಾಗಿ ಒಂದು ಪ್ರವೀಣರ ಸಮಿತಿಯನ್ನು ನೇಮಿಸಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನೀರಾವರಿ ವಿಷಯ ಬಹಳವಾಗಿ ಚರ್ಚೆಯಾಯಿತು. ನೀರಾವರಿಯಲ್ಲಿ ಬಹಳ ಹಿಂದುಳಿದ ಪ್ರದೇಶಗಳಾದ ಕೋಲಾರ ಜಿಲ್ಲೆಯಂಥ ಪ್ರದೇಶಗಳ ಬಗ್ಗೆ ಒಂದು ಮಾತನ್ನು ಹೇಳಲು ನನಗೆ ಬಹಳ ಜಿಗುಪ್ಸೆಯಾಗಿದೆ. ನನ್ನ ಮಿತ್ರರು ಭಾಷಣ ಮಾಡುತ್ತ ಸಣ್ಣ ನೀರಾವರಿ ಕೆಲಸಗಳಿಗೆ 18 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಇದರಲ್ಲಿ ಡೀಪನಿಂಗ್ ಆಫ್ ವೆಲ್ಸ್, ಪರ್ಚೇಸ್ ಆಫ್ ಪಂಪ್ ಸೆಟ್ಸ್, ಸ್ಪಿಲ್ ಓವರ್ ವರ್ಕ್ಸ್ ಇತ್ಯಾದಿ ಕೆಲಸಗಳಿಗೆ ಈ ಹಣವೆಲ್ಲಾ ಖರ್ಚಾಗುತ್ತದೆ. ಹೀಗಾದರೆ ಹೊಸ ಕೆಲಸಗಳಿಗೆ ಏನು ಮಾಡುತ್ತಾರೆ ? ಕೋಟ್ಯಾಂತರ ರೂಪಾಯಿ ಖರ್ಚು ಮಾಡತಕ್ಕ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಿಂದ ಉತ್ಪತ್ತಿ ಬರಬೇಕಾದರೆ ಬಹಳ ನಿಧಾನ. ನಮ್ಮ ಕಡೆ ಗಂಜಿ ಕುಡಿಯತಕ್ಕ ಜನ ಇರುವುದು. ಸ್ವಲ್ಪ ಹಣವನ್ನು ಖರ್ಚು ಮಾಡಿದರೆ ಆರು ತಿಂಗಳಲ್ಲಿ ಪ್ರತಿಫಲ ಬರುತ್ತದೆ. ಅಂಥ ಕೆಲಸಗಳನ್ನು ದಯವಿಟ್ಟು ಮಾಡಬೇಕು. ಕಳೆದ ವರ್ಷ ಬಹಳ ಬುದ್ಧಿವಂತಿಕೆಯಿಂದ ಸಾಲಾಖೈರಿನಲ್ಲಿ ಒಂದೂವರೆ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಅದರಲ್ಲಿ ಒಂದೂ ಕಾಲು ಕೋಟಿ ರೂಪಾಯಿ ಉಳಿದಿದೆ ಎಂದು ಹೇಳಿತ್ತಾರೆ. ಕೆಲವು ಕೆಲಸಗಳು ಅನೇಕ ಕಡೆ ಇನ್ನೂ ಪ್ರಾರಂಭವಾಗಿಯೇ ಇಲ್ಲ. ಆದುದರಿಂದ ಈ ಸಾರ್‌ನಲ್ಲಿಯಾದರೂ ಹಿಂದುಳಿದಿರತಕ್ಕ ಪ್ರದೇಶಗಳಲ್ಲಿ ಕೆರೆ ಕಾಮಗಾರಿಯನ್ನು ಹೆಚ್ಚು ಮಾಡಿಸಲು ಸೂಕ್ತ ಹಣವನ್ನು ಒದಗಿಸಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಪ್ರಜಾಪ್ರಭುತ್ವ ಪದ್ಧತಿ ಇರತಕ್ಕ ಭಾರತ ದೇಶದಲ್ಲಿ ನಾನಾ ಪಕ್ಷ ಪಂಗಡಗಳಿವೆ. ಪಕ್ಷಗಳು ಅಧಿಕಾರಕ್ಕೆ ಬರುವ ಮೊದಲು ತಮ್ಮ ಸಂಖ್ಯಾಬಲವನ್ನು ಹೆಚ್ಚಿಸಿಕೊಳ್ಳಬೇಕು, ತಾವು ಅಧಿಕಾರಕ್ಕೆ ಬರಬೇಕು ಎಂದು ಇರುವಂತೆ ಬೇರೆಯವರಿಗೂ ಇರುತ್ತದೆ. ಅವರವರ ಕೈಲಾದ ರೀತಿಯಲ್ಲಿ ಜನರನ್ನು ಒಲಿಸಿಕೊಂಡು ಅಧಿಕಾರಕ್ಕೆ ಬರುತ್ತಾರೆ. ಅಧಿಕಾರಕ್ಕೆ ಬಂದ ನಂತರ ಅಧಿಕಾರವನ್ನು ಉಳಿಸಿಕೊಳ್ಳಬೇಕೆಂದು ಅದಕ್ಕೆ ಬೇಕಾದಷ್ಟು ಕುಮ್ಮಕ್ಕು ಪಡೆಯತಕ್ಕದ್ದು ನಡೆಯುತ್ತಿದೆ. ಈ ರೀತಿ ತಮ್ಮ ಶಕ್ತಿಯನ್ನು ತಾವು ಬೆಳೆಸಿಕೊಳ್ಳತಕ್ಕ ಸಂದರ್ಭದಲ್ಲಿ ಇನ್ನೂ ಬೆಳೆಯತಕ್ಕ ಇತರ ಪಕ್ಷಗಳ ಸಾಮರ್ಥ್ಯವನ್ನು ಕುಗ್ಗಿಸತಕ್ಕುದು ಒಂದು ರಾಜಕೀಯ ನೀತಿ. ನಮ್ಮ ಭಾರತ ದೇಶದಲ್ಲಿ ಇದನ್ನು ನಾವು ಈಚೆಗೆ ನೋಡುತ್ತಿದ್ದೇವೆ. ಬಹುಶಃ ಮೊದಲು ರಾಜ್ಯಾಂಗವನ್ನು ರಚಿಸಿದಾಗ ಇಡೀ ದೇಶದಲ್ಲಿ ಒಂದೇ ಪಕ್ಷ ಆಡಳಿತದಲ್ಲಿ ಇರುತ್ತದೆ ಎಂದು ನಿರೀಕ್ಷೆ ಮಾಡಿದ್ದರು ಎಂದು ಕಾಣುತ್ತದೆ. ಅದೃಷ್ಟವಶಾತ್ ವಾಸ್ತವವಾಗಿ ಈಗ ಬೇರೆ ಬೇರೆ ಪಕ್ಷಗಳು ಬೇರೆ ಬೇರೆ ರಾಜ್ಯಗಳಲ್ಲಿ ರಾಜ್ಯಭಾರ ಮಾಡುತ್ತಿದೆ. ಇಂಥ ಸಂದರ್ಭದಲ್ಲಿ ಸಂಸ್ಥಾನಕ್ಕೂ ಮತ್ತು ಕೇಂದ್ರಕ್ಕೂ ಒಂದು ತಿಕ್ಕಾಟ. ಆದರೆ, ಪ್ರಜೆಗಳ ಅಭಿಪ್ರಾಯದಂತೆ ಆಯಾ ಪಕ್ಷಗಳು ಅಧಿಕಾರದಲ್ಲಿದ್ದರೂ ಕೂಡ, ಕೇಂದ್ರದಲ್ಲಿ ಅಧಿಕಾರದಲ್ಲಿ ಇರತಕ್ಕ ಸರ್ಕಾರದ ಇನ್ನೊಂದು ರಾಜ್ಯ ಸರ್ಕಾರದ ಮೇಲೆ ಸೇಡು ತೀರಿಸುವುದಾದರೆ, ಜನ ಅದರ ಮೇಲೆ ತಿರುಗಿ ಬಿದ್ದು, ಸರ್ಕಾರ ಬದಲಾಯಿಸಿದರೆ, ಪುನಃ ನಮ್ಮ ಪಕ್ಷಕ್ಕೇ ಬರಬಹುದು ಎನ್ನುವ ದೂರದೃಷ್ಟಿಯನ್ನಿಟ್ಟುಕೊಂಡು ಕೆಲಸ ಮಾಡುತ್ತಿವೆ. ಈ ಸಂಬಂಧವಲ್ಲಿ ನನ್ನ ಪ್ರಾರ್ಥನೆ ಇಷ್ಟೆ. ಯಾವ ಸರ್ಕಾರವೇ ಇರಲಿ, ಯಾವ ಪಕ್ಷವೇ ಇರಲಿ, ಯಾರೇ ಅಧಿಕಾರದಲ್ಲಿರಲಿ, ದೇಶದ ಜನತೆಯ ಕಡೆಗೆ ಗಮನ ಕೊಡಬೇಕು. ಯಾವ ಪಕ್ಷವಿದ್ದರೂ ಕೂಡ, ಯಾವ ಆಡಳಿತವಿದ್ದರೂ ಕೂಡ ಇನ್ನೊಂದು ಪಕ್ಷ ಅದರ ದ್ವೇಷವನ್ನು ತೋರಿಸಿ ಕೆಲಸಮಾಡಬಾರದು. ಇಷ್ಟು ಮಾತನ್ನು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಚಂಪಾಬಾಯಿ ಭೋಗಾಳೆ (ಕಾಗವಾಡ).—ಮಾನ್ಯ ಅಧ್ಯಕ್ಷರೇ, 1970-71ನೇ ಸಾಲಿನ ಬಡ್ಜೆಟ್ಟನ್ನು ಈ ಸಲ ಮಾತೃಭಾಷೆಯಾದ ಕನ್ನಡದಲ್ಲಿ ನಮ್ಮ ಮುಂದೆ ಇಟ್ಟಿರುವುದನ್ನು ತುಂಬ ಸಂತೋಷದಿಂದ ಸ್ವಾಗತಿಸಿ, ಮಾನ್ಯ ಮಂತ್ರಿಗಳಿಗೆ ವಂದನೆಯನ್ನು ಅರ್ಪಿಸಿ ಕೆಲವು ಸಲಹೆಗಳನ್ನು ಸೂಚಿಸಲು ಇಚ್ಛಿಸುತ್ತೇನೆ. ಕೇಂದ್ರ ಸರ್ಕಾರದವರು ಇಲ್ಲಿಯ ತನಕ ನಮ್ಮ ಮೇಲೆ ಮಲತಾಯಿ ಧೋರಣೆಯನ್ನು ತಳೆಯುತ್ತ ಬಂದದ್ದು ಎಲ್ಲರಿಗೂ ಗೊತ್ತಾದ ಮಾತು. ನಮ್ಮ ಸರ್ಕಾರದವರು ಹಳ್ಳಿಯ ಜೀವನದ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕು ಮತ್ತು ಅಲ್ಲಿನವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಪ್ರಯತ್ನ ಮಾಡಬೇಕು. ಎಲ್ಲರೂ ಷಹರಿನ ಕಡೆಗೆ ಹೆಚ್ಚು ಲಕ್ಷ ಕೊಡುತ್ತಿದ್ದಾರೆ. ಅವರು ಹಳ್ಳಿಯ ಕಡೆಗೂ ಹೆಚ್ಚು ಲಕ್ಷ್ಯ ಕೊಟ್ಟರೆ ರಾಜ್ಯದ ಆಡಳಿತ ನಡೆಸುವುದಕ್ಕೆ ನೆರವು ಕೊಡುತ್ತಾರೆ, ರಾಜ್ಯ ಕಟ್ಟುವುದಕ್ಕೆ ರೈತರಿಗೆ ಒಂದು ಸಾಮರ್ಥ್ಯ ತಂದುಕೊಟ್ಟು ಹಳ್ಳಿಯ ಜನತೆಯ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀಮತಿ ಚಂಪಾಬಾಯಿ ಭೋಗಾಳೆ)

ಈ ವರ್ಷದ ಬಡ್ಜೆಟ್‌ನಲ್ಲಿ ಉಳಿತಾಯವಾಗುವಂಥ ಸೂಚನೆಗಳನ್ನು ಮಾಡಿದ್ದಾರೆ. ಲಾಟರಿಯಿಂದ ಲಾಭ, ಎಕ್ಸ್ಯಾಸ್ ಮತ್ತು ಇತರ ಕೆಲವು ವಿಚಾರಗಳಲ್ಲಿ ಹಣವನ್ನು ಉಳಿತಾಯ ಮಾಡಿದ್ದಾರೆ. ಕೈಗಾರಿಕೆಗಳನ್ನು ಹೆಚ್ಚಾಗಿ ಹಳ್ಳಿಗಳಲ್ಲಿ ಪ್ರಾರಂಭ ಮಾಡಬೇಕು. ಹಳ್ಳಿಗಳಲ್ಲಿ ಜೀವನ ಪರಿಸ್ಥಿತಿ ಬಹಳ ಕಠಿಣವಿದೆ. ಮಳೆ ಇರುವುದಿಲ್ಲ, ಬೆಳೆ ಇರುವುದಿಲ್ಲ. ಅಂಥ ಕಡೆ ಕೈಗಾರಿಕೆ, ಉದ್ಯಮದಂಥ ತೆಗೆದರೆ ಆ ಜನರ ಜೀವನ ಮಟ್ಟ ಉತ್ತಮವಾಗಿರುತ್ತದೆ. ರೈತರಿಗೆ ಸಹಾಯ ಮಾಡಲು ಅನೇಕ ರೀತಿಯಲ್ಲಿ ರೊಕ್ಕ ಕೊಡುತ್ತಾರೆ. ಅದೆಲ್ಲಾ ಒಬ್ಬರ ಕಡೆಗೆ ಹೋಗುತ್ತದೆ. ಕೊಟ್ಟಾದ ಮೇಲೆ ಕೇಳದ ಹಾಗೆ ಆಗಿದೆ. ರೈತರಿಗೆ ಅದೆಲ್ಲಾ ವಾಪಸು ಕೊಡುವಂತೆ ಮಾಡಬೇಕು. ಇಲ್ಲಿಯ ತನಕ, ಬಾರ್ಡರ್ ಕಟ್ಟದೆ ಇದ್ದಾರೆ. ಬೇಗ ಕಟ್ಟಬೇಕು. ಆಗ ನೀವು ಹೆಚ್ಚಿಗೆ ರೊಕ್ಕ ಖರ್ಚುಮಾಡದೆ ಇದ್ದುದಕ್ಕಾಗಿ ಈಗ ಸರ್ಕಾರದವರು ಪಶ್ಚಾತ್ತಾಪಪಡಬೇಕಾಗಿದೆ. ಇನ್ನಾದರೂ ದೇಶಕ್ಕೆ ಅಂಥ ದೊಡ್ಡ ದೊಡ್ಡ ಸಂಕಟಗಳು ಬಾರದಿರುವಂತೆ ಮಾಡುವುದಕ್ಕಾಗಿ ಸಾಕಷ್ಟು ಹಣವನ್ನು ಇದಕ್ಕೆ ಮೀಸಲಾಗಿಡಬೇಕೆಂದು ಹೇಳುತ್ತೇನೆ. ಮತ್ತು ಕನ್ನಡ ರಾಜ್ಯದ ಹೆಮ್ಮೆಯನ್ನು ಈಡೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಷೆಡ್ಯೂಲ್ಡ್ ಕ್ಯಾಸ್ಟ್‌ನವರ ವಿಚಾರದಲ್ಲಿ ನಾನು ಒಂದೆರಡು ಮಾತುಗಳನ್ನು ಆಡಬೇಕೆಂದಿದ್ದೇನೆ. ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿದ ಮಾತ್ರಕ್ಕೆ ಹರಿಜನ ಉದ್ಧಾರವಾಗಲಿಲ್ಲ. ಆ ಹಣವನ್ನು ಕ್ರಮವರಿತು ಖರ್ಚು ಮಾಡಿದರಲ್ಲವೇ ಅವರು ಉದ್ಧಾರವಾಗುವುದು ? ಹರಿಜನರ ಉದ್ಧಾರ ಎಂದರೆ ಯಾರೋ ಒಬ್ಬೊಬ್ಬರಿಗೆ ಅನುಕೂಲ ಮಾಡುವುದಲ್ಲ. ಅವರಿಗೆ ಇಡತಕ್ಕ ಹಣ ಎಲ್ಲಾ ಹರಿಜನರಿಗೂ ಸರಿಯಾಗಿ ವಿನಿಯೋಗವಾಗುತ್ತವೆಯೋ ಎಂಬುದನ್ನು ಪರಿಶೀಲಿಸಬೇಕು. ಸರ್ಕಾರದವರು ಯಾವ ಯಾವ ಸ್ಕೀಮಿಗೆ ಎಷ್ಟೆಷ್ಟು ಹಣವನ್ನು ತೆಗೆದಿಟ್ಟಿದ್ದರು ಮತ್ತು ಆ ಬಗ್ಗೆ ಯಾವ ಯಾವುದಕ್ಕೆ ಎಷ್ಟೆಷ್ಟು ಹಣ ಖರ್ಚಾಗಿದೆ ಎಂಬುದನ್ನು ನೋಡಬೇಕು. ಹಾಗೆ ಮಾಡದೆ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿದ್ದೇವೆ ಎಂದು ಕುಳಿತುಬಿಟ್ಟರೆ ಹರಿಜನರ ಉದ್ಧಾರವಾಗುವುದಿಲ್ಲ.

ಇನ್ನು ಸೀನಿಯಾರಿಟಿ ಪಟ್ಟಿಯ ವಿಚಾರಕ್ಕೆ ಬಂದರೆ ಹಿಂದೆ ಇದ್ದ ಸೀನಿಯಾರಿಟಿ ಪಟ್ಟಿಯನ್ನು ರದ್ದು ಮಾಡಿ ಮತ್ತೆ 1969ರಲ್ಲಿ ಮತ್ತೊಂದು ಪಟ್ಟಿಯನ್ನು ಮಾಡಿದ್ದಾರೆ. ಹೀಗೆ ಪಟ್ಟಿಯನ್ನು ಬದಲಾಯಿಸುತ್ತಾ ಹೋದರೆ ಹರಿಜನ ನೌಕರಿಗೆ ಬಹಳ ಅನ್ಯಾಯವಾಗುತ್ತದೆ. ಅವರಿಗೆ ಹಣದ ರೂಪದಲ್ಲೂ ಅನ್ಯಾಯವಾಗುತ್ತದೆ. ಸೀನಿಯಾರಿಟಿ ಪಟ್ಟಿಯಲ್ಲಿ ಒಂದೆರಡು ಜಾಗಗಳು ಹೆಚ್ಚುಕಡಮೆ ಆದರೆ ನೂರಾರು ರೂಪಾಯಿಗಳ ರೊಕ್ಕ ಹೆಚ್ಚುಕಡಮೆಯಾಗುತ್ತದೆ. ಇದರಿಂದ ಹರಿಜನಕ್ಕೆ ಅನ್ಯಾಯವಾಗುವುದಿಲ್ಲವೇ ? ಹೀಗಾಗಿ ಸರ್ವೆ ಅಂಡ್ ಸೆಟಲ್‌ಮೆಂಟ್ ಇಲಾಖೆಯಲ್ಲಿ 3 ವರ್ಷಗಳ ಕಾಲ ಕೆಲಸ ಮಾಡಿದ್ದಾರೆ ಮತ್ತು ಎಕ್ಸೈಜ್ ಇಲಾಖೆಯಲ್ಲಿ 5 ವರ್ಷ ಕೆಲಸ ಮಾಡಿದ್ದಾರೆ. ಹೀಗೆ ಒಟ್ಟು 8 ವರ್ಷ ಕೆಲಸಮಾಡಿದ್ದರೂ ಅವರನ್ನು ತೆಗೆದು ಹಾಕಿ ಹೊಸಬರಿಗೆ ಕೆಲಸ ಕೊಡುವುದಕ್ಕೆ ಹೊರಟಿದ್ದಾರೆ. ನಮ್ಮ ಸರ್ಕಾರ ಏಕೆ ಈ ಹರಿಜನರಿಗೆ ಅನುಕೂಲ ಮಾಡಲು ಹೀಗೆ ಹಿಂಜರಿಯುತ್ತಿದೆಯೋ ನಾನು ಕಾಣೆ. ಆದ್ದರಿಂದ ಪದೇ ಪದೇ ಹೀಗೆ ಸೀನಿಯಾರಿಟಿ ಪಟ್ಟಿಗಳನ್ನು ಬದಲಾಯಿಸಬಾರದೆಂದು ಹೇಳುತ್ತೇನೆ.

ಇನ್ನು ಸ್ಕಾಲರ್‌ಷಿಪ್‌ಗಳನ್ನು ಕೊಡತಕ್ಕ ವಿಚಾರದಲ್ಲೂ ಕೂಡ ಹರಿಜನರಿಗೇನೂ ಅನುಕೂಲವಾಗುತ್ತಿಲ್ಲ. ಒಬ್ಬ ವಿದ್ಯಾರ್ಥಿಗೆ ಕೊಡಲಾಗುತ್ತಿರುವ ಗ್ರಾಂಟನ್ನು ಅಂದರೆ ಹಾಲಿ ಕೊಡುತ್ತಿರುವ 25 ರೂಪಾಯಿಗಳ ಬದಲು ಅದನ್ನು 35 ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆದ್ದರಿಂದ ಹಾಲಿ ಕೊಡತಕ್ಕ ಗ್ರಾಂಟ್ ಹಣ ಸಾಲದು ಇದನ್ನು ಇನ್ನೂ ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ. ಮತ್ತು ಹರಿಜನರಿಗೆ ಹೆಚ್ಚು ಹೆಚ್ಚು ನೌಕರಿಗಳನ್ನೂ ಮತ್ತು ಉದ್ಯೋಗಗಳನ್ನೂ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸೋಷಿಯಲ್ ವೆಲ್‌ಫೇರ್ ವಿಚಾರಕ್ಕೆ ಬಂದರೆ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ ಜನರಿಗೇನೂ ಅನುಕೂಲವಾಗುತ್ತಿಲ್ಲ. ಇದಕ್ಕೆ ಸೋಷಿಯಲ್ ವೆಲ್‌ಫೇರ್ ಆಫೀಸುಗಳು ಬೇರೆ. ಇಷ್ಟೆಲ್ಲಾ ಇದ್ದರೂ ಹಣ ಜನರಿಗೆ ಸರಿಯಾಗಿ ಮುಟ್ಟುತ್ತಿಲ್ಲ. ಸೋಷಿಯಲ್ ವೆಲ್‌ಫೇರ್ ಬೋರ್ಡು ಮತ್ತು ಆಫೀಸುಗಳನ್ನು ಇಟ್ಟುಕೊಂಡಿರುವುದು ನೌಕರರಿಗೆ ಸಂಬಳಸಾರಿಗೆ ಹಂಚುವುದಕ್ಕೇ ವಿನಾ ಹರಿಜನರಿಗೆ ಅನುಕೂಲ ಮಾಡುವುದಕ್ಕಾಗಿ ಅಲ್ಲ. ಒಂದು ಹಾಸ್ಟಲಿನಲ್ಲಿ 50 ಜನ ವಿದ್ಯಾರ್ಥಿಗಳಿದ್ದರೆ ಅದರಲ್ಲಿ 10 ಜನರು ಮಾತ್ರ ಹರಿಜನರು ಇರುತ್ತಾರೆ. ಆದರೆ ಸರ್ಕಾರದವರು ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕ ಹಣವೆಲ್ಲಾ ಹರಿಜನರ ಉದ್ಧಾರಕ್ಕೆ

ಎಂದು ಹೇಳುತ್ತಾರೆ. ಇದು ಯಾವ ನ್ಯಾಯ ? ಹರಿಜನರನ್ನು ಉದ್ಧಾರ ಮಾಡಬೇಕೆಂಬ ಮನಸ್ಸು ಸರ್ಕಾರದವರಿಗಿದ್ದರೆ ಅವರು ನಮಗೇ ಪ್ರತ್ಯೇಕ ಸ್ಕೀಮುಗಳನ್ನು ಮಾಡಿ ಅದಕ್ಕೆ ಹಣವನ್ನು ಮೀಸಲಾಗಿಡಬೇಕೆಂದು ಒತ್ತಾಯ ಮಾಡುತ್ತೇನೆ. ರಾಜ್ಯದಲ್ಲಿರತಕ್ಕ ಹರಿಜನರಲ್ಲಿ ಯಾರು ಯಾರು ಎಲ್ಲೆಲ್ಲಿ ಎಷ್ಟೆಷ್ಟಿದ್ದಾರೆ, ಯಾರ ಅಭಿವೃದ್ಧಿ ಎಷ್ಟಾಗಿದೆ ಎಂಬುದನ್ನು ಸರ್ಕಾರದವರು ಏಕೆ ಸರ್ವೆ ಮಾಡಿಸಬಾರದು ? ಹಾಗೆ ಸರ್ಕಾರದವರು ನಿಜ ಸ್ಥಿತಿಯನ್ನು ತಿಳಿಯದೆ ಹರಿಜನರ ಹೆಸರಿನಲ್ಲಿ ಖರ್ಚು ಮಾಡತಕ್ಕ ಈ 5-10 ಲಕ್ಷ ರೂಪಾಯಿಗಳೆಲ್ಲಾ ವ್ಯರ್ಥವಾದಂತೆಯೇ ವಿನಾ ಹರಿಜನರಿಗೇನೂ ಅನುಕೂಲವಾಗುವುದಿಲ್ಲ. ಅದಕ್ಕಾಗಿ ಸ್ಪೆಷಲ್ ಸ್ಕೀಮುಗಳನ್ನು ಮಾಡಿ ಹಣವನ್ನು ಒದಗಿಸಬೇಕೆಂದು ಒತ್ತಾಯ ಮಾಡುತ್ತೇನೆ. ಸರ್ಕಾರದವರು ಏಕೆ ಜಿಲ್ಲಾವಾರ್ ಹರಿಜನರ ವೆಲ್‌ಫೇರ್ ಆಫೀಸನ್ನು ತೆರೆದು ಅವರಿಗೆ ಪ್ರತ್ಯೇಕ ಸ್ಕೀಮುಗಳನ್ನು ಮಾಡಿ ಕಾರ್ಯಗತ ಮಾಡಬಾರದು ? ದಯವಿಟ್ಟು ಸರ್ಕಾರದವರು ಇನ್ನು ಮುಂದಕ್ಕಾದರೂ ಈ ಸ್ಪೆಷಲ್ ಸ್ಕೀಮುಗಳನ್ನು ಮಾಡಿ ಹರಿಜನರನ್ನು ಉದ್ಧಾರ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಅಗ್ರಿಕಲ್ಚರಲ್ ಇಲಾಖೆಯಲ್ಲಿ ಹರಿಜನರಿಗೆ ಎಲ್ಲಿಯೂ ಅನುಕೂಲ ಮಾಡಿದ್ದನ್ನು ನಾನು ನೋಡಿಲ್ಲ. ಹರಿಜನರಿಗೆ ಸಾಕಷ್ಟು ಜಮೀನುಗಳು ಸಿಕ್ಕುತ್ತಿಲ್ಲ. ಬೇಸಾಯ ಮಾಡುವುದಕ್ಕೆ ಹೊಲವಿಲ್ಲ, ನೌಕರಿಯಲ್ಲಿ ಸೀನಿಯಾರಿಟಿ ತೊಂದರೆ. ಹೀಗೆ ಹರಿಜನರಿಗೆ ಎಲ್ಲೆಲ್ಲಿಯೂ ತೊಂದರೆ ಇದ್ದರೆ ಅವರ ಅಭಿವೃದ್ಧಿ ಹೇಗೆ ಸಾಧನೆಯಾಗಬೇಕು ?

ಇನ್ನು ದವಾಖಾನೆಯ ಬಗ್ಗೆ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ನಮ್ಮ ಗ್ರಾಮಕ್ಕೆ ಸಮೀಪದಲ್ಲೇ ಇರತಕ್ಕ ಒಂದು ಹಳ್ಳಿಗೆ ಸುತ್ತಲೂ ಕೃಷ್ಣಾ ನದಿ ಆವರಿಸಿದೆ. ಮಳೆಗಾಲದಲ್ಲಿ ಅಲ್ಲಿನ ಜನರು ಹೊರಗೆ ಬರುವುದಕ್ಕೇ ಸಾಧ್ಯವಿಲ್ಲ. ಅಲ್ಲಿ ಕಾಲರಾ ಇತ್ಯಾದಿ ರೋಗ ಬಂದರೆ ಔಷಧಿಯಿಲ್ಲದೆ ಜನರು ಸಾಯಬೇಕಾಗಿದೆ. ಅದಕ್ಕಾಗಿ ಅಲ್ಲಿ ಒಂದು ದವಾಖಾನೆ ಮಾಡಿಕೊಡಿ ಎಂದು ನಾನು ಕೇಳುತ್ತಿದ್ದೇನೆ, ಇಲ್ಲಿಗೆ ಮೆಂಬರಾಗಿ ಬಂದು 13 ವರ್ಷಗಳಾಯಿತು, ಆದರೆ ಅಲ್ಲಿಗೆ ಒಂದು ದವಾಖಾನೆ ಮಾಡಿಕೊಡುವುದು ಬೇಡವೇ ? ಆ ಸ್ಥಳದ ಪರಿಸ್ಥಿತಿಯಾದರೂ ಏನಾಗಿದೆ ಎಂಬುದನ್ನು ಸರ್ಕಾರದವರು ನೋಡುವುದು ಬೇಡವೇ ? ನಾನು ದವಾಖಾನೆಯನ್ನು ಕೇಳತಕ್ಕ ಸ್ಥಳಕ್ಕೆ ಸುತ್ತ 10 ಮೈಲಿ ಫಾಸಲೆಯಲ್ಲಿ ಎಲ್ಲಿಯೂ ಒಂದು ದವಾಖಾನೆಯಿಲ್ಲ. ನಾನು ಹೇಳತಕ್ಕದ್ದು ಸರಿಯೇ ಅಲ್ಲವೆಂಬುದಕ್ಕಾದರೂ ಸರ್ಕಾರದವರು ಸರ್ವೆ ಮಾಡಿಸಿ ನಾನು ಹೇಳತಕ್ಕದ್ದು ನ್ಯಾಯವಾಗಿದ್ದರೆ ಕೂಡಲೆ ಅಲ್ಲಿಗೆ ಒಂದು ದವಾಖಾನೆಯನ್ನು ಮಾಡಿಕೊಡಬೇಕೆಂದು ನಾನು ಶೀಗುಣಸಿಗೆ ಸಂಬಂಧಪಟ್ಟ ಮಂತ್ರಿಗಳಿಗೆ ಪತ್ರ ಬರೆದು ಮೂರು ವರ್ಷಗಳ ಮೇಲಾಯಿತು. ಇಲ್ಲಿಯವರೆಗೂ ಕೂಡ ಅವರಿಂದ ನನಗೆ ಒಂದು ಪತ್ರ ಸೈತಾ ಬರಲಿಲ್ಲ. ಈಗಲಾದರೂ ಸರ್ಕಾರದವರು ಆ ಸ್ಥಳಕ್ಕೆ ಶೀಗುಣಸಿಗೆ ದಯವಿಟ್ಟು ಒಂದು ದವಾಖಾನೆಯನ್ನು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೃಷ್ಣಾ ನದಿ ನನ್ನ ಕ್ಷೇತ್ರದಲ್ಲಿ ಹರಿಯುತ್ತಿದೆ. ಅದಕ್ಕೆ ಅಲ್ಲಲ್ಲೇ ಸಣ್ಣ ಸಣ್ಣ ಡ್ಯಾಮುಗಳನ್ನು ಕಟ್ಟಿಸಿ, ರೈತರಿಗೆ ಅನುಕೂಲ ಮಾಡಿಸಿ ಕೊಟ್ಟರೆ ಒಳ್ಳೆಯದು. ಆ ಹಳ್ಳಿಯ ಜನರೇ ನಮ್ಮನ್ನೆಲ್ಲಾ ಮುಂದಕ್ಕೆ ತಂದವರು. ಇಲ್ಲದಿದ್ದರೆ ನಾವು ರಾಜಕೀಯದಲ್ಲಿ ಈ ಸ್ಥಾನಕ್ಕೆ ಬಂದು ಕುಳಿತುಕೊಳ್ಳುವುದಕ್ಕಾಗುತ್ತಿರಲಿಲ್ಲ. ಆದುದರಿಂದ ಸರ್ಕಾರದವರು ಆ ಹಳ್ಳಿಜನರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕೆಂದೂ ಮತ್ತು ಅವರಿಗೆ ಹೆಚ್ಚಿನ ವಿದ್ಯುಚ್ಛಕ್ತಿಯನ್ನೂ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಹರಿಜನರು ಅಡ್ಮಿನಿಸ್ಟ್ರೇಷನ್ನಿನಲ್ಲೂ ಬಹಳ ಹಿಂದುಳಿದಿದ್ದಾರೆ. ಅವರಿಗೆ ಸಾಕಷ್ಟು ಪ್ರೋತ್ಸಾಹ ಸಿಕ್ಕುತ್ತಿಲ್ಲ ಎಂಬುದಕ್ಕೆ ಇದೇ ಸಾಕ್ಷಿ. ಆದ್ದರಿಂದ ಸರ್ಕಾರದವರು ಹರಿಜನರ ಉದ್ಧಾರಕ್ಕಾಗಿ ಅವರಿಗೆ ಸ್ಪೆಷಲ್ ಸ್ಕೀಮುಗಳನ್ನು ಮಾಡಿ ಅವರಿಗೇ ಪ್ರತ್ಯೇಕ ಗ್ರಾಂಟುಗಳನ್ನು ಕೊಟ್ಟು ಅವರಿಗೆ ಅನುಕೂಲ ಮಾಡಬೇಕೆಂದು ಕೇಳಿಕೊಂಡು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The Finance Minister to reply.

Sri H. SIDDAVEERAPPA.—Sir, we have been sitting today for over 8 hours and not even one member from our Party has been allowed to speak. The hon. Member Sri Aziz Sait has been standing every time and yet he has not been allowed to speak. Is this the way our Party should be treated ? I am really surprised. Is there any justice here?

(SRI H. SIDDAVEERAPPA)

If you do not want, you may give a guideline hereafter that only so many members can speak. I am really sorry for this. There is not even an appearance of fairplay in this. Mr. Aziz Sait has been attempting to speak right from the morning today. Is this the way he should be treated ?

Mr. SPEAKER.—I really thought that hon. Members appreciated the way in which the debate was carried on. I am surprised at the remarks of the Hon. Member Sri Siddaveerappa. As regards division of time a certain time is allotted to each party for allotting that time amongst its party members and that was approved and that is being very strictly implemented. I do not think there is any better method of doing things. It is not possible to give chance to every member.

Sri AZIZ SAIT.—There are twenty-seven lakh Muslims in the State. The representatives of every community have spoken.

Mr. SPEAKER.—I wish to make it clear that we are a secular State. I give opportunities to members as members. I do not make distinction between Hindus, Muslims and Christians. If the hon. member is thinking in terms of communities, it will not be secular attitude when the hon. Member came to my Chambers, I assured, him that I can give ten minutes. But when I called him to speak he went away. Even at this late hour if he wants to speak, I have no objection. Hon. Member may speak for 10 Minutes.

Sri H. SIDDAVEERAPPA.—I will leave it to the hon. member. What I am saying is justice must not only be done but seemingly done. You said that some rational method was evolved. I submit it may not be rational. I do not know how it was evolved. I would request you to bring this before the Business Advisory Committee or call for another meeting.

Sri AZIZ SAIT (Narasimharaja).—Mr. Speaker, I rise to oppose the budget presented by the hon. Finance Minister. We have been talking much of socialism, secularism and what not I personally feel that the budget which has been presented provides for Rs. 52 crores for Education. We have declared that our official language is Kannada. May I ask the Minister in charge of Education whether he has ever thought of introducing Kannada as the Compulsory language from the primary level in the State of Mysore ? There are 27 lakhs Urdu speaking people. I have been demanding right from 1961 to make Kannada as a compulsory language in these schools. In 1961 the Government of Mysore came forward with the order that Kannada is made compulsory language in all Primary Urdu or Marathi Schools. In 1962 there was an agitation from a minority section namely Marathi people from Belgaum region. Just to satisfy the Marathi friends the Government brought out another order in 1962 cancelling their own previous order and making Kannada as optional. Wherever Urdu schools are there not a

single Kannada teacher is there. How do you expect the minority language speaking people to come up and enter into services of Government ? It is a shame that you want to have the official language as Kannada and yet you do not provide facilities for learning it. The 2½ crores of people of the State claim Kannada as their own language and yet you do not provide facilities for learning it. Kannada is nobody's property ; it is the State's property. Several Circulars are there in the Minorities Commissioner's Report but these have been hushed up by the Under Secretary, in the Home Department. No action is taken to implement the report. You still say that our language is Kannada. Whenever a person wants to learn Kannada you must give facility to learn it. unfortunately in this country, a tendency is developing particularly amongst the Jan Sangh members. They have given a new slogan of Indianisation. Indianising of whom ? Is it Indianising only Muslims ? I can tell you that we are more Indianised and I can say that my mother tongue is Marathi. We have no regional bias. My wife comes from Tamilnadu. We have no regional bias. We may live anywhere in India. We are first and last Indians. But we are fighting as different nations. It is most shameful to hear this slogan. We have more major issues before us than this Indianisation.

Secondly I want to speak about the Police Department. Recently the I.G.P. said that there is only one constable for every 15,000 persons. I do not know on what basis the calculation is made. This is nothing but a Police Raj. I have been charged in 54 cases and not even in one case I was convicted. Merely because there have been some yes-men, some Ministers, I am sorry to say, in the name of the State tour only a particular district and out of bias want to harm people. Whenever they go, right from the constable to Sub-Inspector they call and they instigate the people and all the moneys of the State are spent for this purpose. In this Ministry there are different categories of Ministers. There are about 28 Ministers and one-third of them are active Ministers and they are working honestly ; the other one-third are suffering from blood pressure and diabetics and the other one-third are "bed-pleasure" men. These people are running the affairs of the State ! I am sorry to say that in the name of democracy you are spending money. You have given the hon. members one work and that is to give various certificates—conduct certificates, character certificates and caste certificates. Even for scholarships the poor Harijans come to us for a caste certificate.

I ask you why should the members of the Municipal Councils, Taluk Boards and Panchayaths and dignitaries not be asked to sign the testimonials? Why the Members of Legislature alone should sign character and conduct certificates ? Not only that. We have to sign the life certificate of old, retired Government servants and certify that that person is alive. This is the work imposed on the M. L. As. The Officers won't do this; they don't want any task. Since the Ministers and Officers will not be available to them they come to M.L.As. The M.L.As.

(SRI AZIZ SAIT)

are supposed to be responsible and respectable persons. Are not the members of Taluk Boards, Panchayats and Municipalities responsible persons? Democracy has five stages Panchayats, Taluk Boards, District Boards, Assembly and Parliament. An officer who was cutting jokes with me stated that this country had four thousand and odd Pallegars in place of those removed and those four thousand Pallegars have been converted into M. L. As. The places of the 500 and odd Maharajas and Newabs who have been removed, have been taken by 500 and odd Members of Parliament. This is all that has happened in the name of democracy. I do not know why M.L.As. have been pinned to this job of signing testimonials and certificates. So far as attesting of signatures to these certificates are concerned, we are considered respectable and responsible citizens. But when we ask Government to furnish certain information, the Ministers say that the matter is highly confiidential and the information cannot be furnished in the interest of the State. Then they cannot take us into confidence and disclose the information we want; very soon we become irresponsible and lose respect at the hands of the Government. The I. A. S. Officers have come from the sky ; they are heaven-born ; and so they decline signing certificates. But although we are elected by the people and we are people's representatives and from amongst us the Ministers are chosen, we are not given the respect due to us.

That apart, once the Members become Ministers or Speaker or elevated to some high post, they become Maharajas and Navabs and practise touh me-notism. Another tendency is that they become partisam and encourage groupism which hinders efficiency and smooth work. Any matter has to be decided purely on the merits and demerits of a case and not on other considerations. If an application comes, the first query on this : who has sent this representation ? Is it from the Congress Party and is it from the Minister's group ? There is Ramakrishna Hegde's group, Veerendra Patil's group, Rachaiah's group this group and that group. This is the consideration on which matters have been decided. I have got great respect for some Ministers who work without fear or favour; they have decided some matters on merit. But some of the Ministers are cut-throat Ministers. They have been doing anything and everything and what not according to their caprice. When I put a question in this House about a Minister, I was asked and even challenged to come forward with a concrete complaint. So I placed a charge-sheet against Sri K. Puttaswamy, Minister for Law, Labour and Parliamentary Affairs; formerly he was Minister for Health and Medical Departments, and also Minister for Municipal Administration. I made some charges against him and filed a charge sheet with the Leader of the House and the Hon. Speaker, and requested that the charges may be enquired into. The first charge against Sri Puttaswamy was that he got his brother appointed as Assistant Surgeon even before he had completed the House Surgeonship.

The second charge against him was that he had got admitted his brother to the Medical College although he had failed a number of times and passed P. U. C. in the Supplementary Examination. Whether it is Sri Veerendra Patil or whoever it is, when a charge-sheet is sent to him against a Minister through the Speaker, it is his bounden duty as Chief Minister to take concrete steps on it and have the charges enquired into. But this complaint has been ignored and no action has been taken on it. The Hon. Chief Minister had not the courtesy to reply me and say whether action would be taken on it or not. I once again request that the charge-sheet I have filed against that particular Minister Sri Puttaswamy must be immediately enquired into. The same person was appointed as Minister for Labour and Parliamentary Affairs. After he took charge as Labour Minister, do you know what has happened to the labour interest in our State? You know what has happened to the labour class in the Minerva Mills, Mysore Mills and the M. E. I. The mills are in hot water and the workers are suffering, unable to get justice. The Labour Department is sleeping. We have set apart crores of rupees for the Labour Department and ameliorating the condition of the labour class. But it has become a wretched department. No Conciliation is going on, Cases have been delayed and things have been going on according to his whims and fancies. The Unions have been forced by the Labour Commissioner, at the instance of the Minister to see that they enter into agreement and that agreement according to his whims and fancies. Is it justice? Is it Government or is it Constitutional rule we have got in this country? Because he is a Jee Hujur he is continued as Minister. He is trying to create trouble also. He has stabbed in the back in the Municipal Presidential elections at Mysore, he mano uvred for the withdrawal of their official candidate and got his own person elected. He has enjoyed power for 27 years. How long does he want to continue in power. I am irritated. I am sorry I cannot speak in a calm atmosphe e and make my comments on the Budget. I will leave it there.

A sum of Rs. 80,000 was sanctioned for constructing a Urdu School in Davanagere. Although the money was allotted the work was not taken up. The sum of Rs. 80,000 was reappropriated for constructing some other building. Today the estimate for the same school has come to Rs. 2 lakhs; even now the proposal with regard to that School is under consideration. I do not know what is going to happen in the next few years. That is how the minorities have been neglected. There is a school called A. H. P. School in Mysore; it is working in shifts; we have represented to the D. P. I. that the population of the Muslim community has increased and since the number of students have increased, a new school may be started; but no new school has been started. Although 22 years have elapsed after Independence, at the lower level we have not yet achieved emotional integration. Still we talk about national and emotional integration. We do not know

(SRI AZIZ SAIT)

what it is. To give an instance, still we have got a Urdu Range Inspector and a Kannada Range Inspector. I could not understand the reason for their existance. If we want Urdu medium, we must request the Director of Public Instruction and the Minister for Education to grant us English medium. When I asked for English medium, the former Education Minister Sri Anna Rao Ganamukhi questioned me as to why I was asking for English medium. I told him that if we ask for English medium, Urdu medium would be given. I cannot understand this mentality. English is not the personal property of anybody. The late Sri Srinivasa Iyengar, the father of Sri M. S. Swaminathan, Secretary to Government, started learning Persian and Arabic in his 60th year. Knowledge is so vast that it is not late to learn any language. My suggestion is if somebody requests a particular medium of instruction whether it be Urdu, Tamil or Telugu, it should be given if there are 15 students for that language and one Teacher in that language appointed. Abolish the posts of Urdu Range Inspector and Kannada Range Inspector. Have one Inspector for Education on Exective side.

Since you have one Language Inspector for every district, is it possible for him to do justice to all ? We are prepared to learn four languages, Urdu, Kannada, English and Hindi. Therefore please re-examine and evolve a new policy to suit the Indian people and give equal justice to the minorities who are in the country.

6-30 P.M.

You have several committees constituted for employment, housing, agriculture, text books, etc. I request you to kindly see our representatives are also put on these committees. Even in regard to appointment to services, please give proper representation to our community.

With these words, I thank the Chair. I also thank the Hon. Minister Sri Ramakrishna Hegde for giving me a chance to speak. Before I conclude I want to make one appeal to the Hon. Speaker. I am told in America, doctors have found out a new thesis. They say that reason for a person being upset is that there is a vein in the brain which requires a thorough checkup. I think Dr. Verma would be the best man to give our Speaker some advice.

MR. SPEAKER.—I think the remarks made by the hon. member are very disrespectful. He should not have made such remarks. I gave him time to speak not on anybody's recommendation. It is not correct to speak like that. It is not of parliamentary etiquette Now the Finance Minister will reply to the debate.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಕಳೆದ ಮೂರು ನಾಲ್ಕು ದಿನಗಳಿಂದ ಶ್ರೀಮಾನ್ ಶಿವಪ್ಪನವರಿಂದ ಹಿಡಿದು ಶ್ರೀಮಾನ್ ಅಜೀಜ್ ಸೇಟ್ ರವರೆಗೆ ಸಭೆಯ ಮಾನ್ಯ ಸದಸ್ಯರು ಬಡ್ಜೆಟ್ ಚರ್ಚೆ ಮೇಲೆ ಮಾಡಿದ ಭಾಷಣಗಳನ್ನು ಲಕ್ಷ್ಯ ಪೂರ್ವಕವಾಗಿ ನಾನು ಕೇಳಿದ್ದೇನೆ. ಈ ಸಲದ ಮುಂಗಡ ಪತ್ರದ ಮೇಲೆ ಸಾಮಾನ್ಯವಾಗಿ ಟೀಕೆ ಹೆಚ್ಚಿಗೆ ಬರಲಿಲ್ಲ ಎಂದು ಹೇಳಿದರೆ ತಪ್ಪಾಗ

ಲಾರದು. ಈ ಮುಂಗಡ ಪತ್ರದ ಬಗ್ಗೆ ನಾಲ್ಕು ಒಳ್ಳೆಯ ಮಾತುಗಳನ್ನು ಹೇಳಿದ ಮತ್ತು ಹಲವಾರು ರಚನಾತ್ಮಕ ಸೂಚನೆಗಳನ್ನು ಮಾಡಿದ ಸದಸ್ಯರಿಗೆ ನಾನು ನನ್ನ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಈ ಸಾರಿ ದ ಚರ್ಚೆ ಎರಡು ರೀತಿಯಿಂದ ವಿಶಿಷ್ಟವಾಗಿತ್ತು ಎಂದು ನನಗೆ ಕಾಣುತ್ತದೆ. ಮೊದಲನೆಯದು ಹೋದಸಲ ಈ ಸಭೆಯ ಈ ಕಡೆ ಕುಳಿತ ನನ್ನ ಅನೇಕ ಸ್ನೇಹಿತರು ಇಲ್ಲಿಯವರೆಗೆ ಮುಂಗಡ ಪತ್ರವನ್ನು ಸ್ವಾಗತ ಮಾಡುತ್ತಿದ್ದಂಥ ನನ್ನ ಸ್ನೇಹಿತರು ಈ ಸಲ ಸಭೆಯ ಆ ಕಡೆ ಹೋಗಿ ಕುಳಿತುಕೊಂಡು ಅದನ್ನು ವಿರೋಧ ಮಾಡಿದ್ದಾರೆ. ಎರಡನೆಯ ವೈಶಿಷ್ಟ್ಯ ಈ ಸಲದ ಚರ್ಚೆಯಲ್ಲಿ ಸಮತಾವಾದದ ತತ್ವ ಮತ್ತು ಅದನ್ನು ಕಾರ್ಯಗತ ಮಾಡತಕ್ಕಂಥ ಕಾರ್ಯಕ್ರಮಗಳು ಇವುಗಳ ಬಗ್ಗೆ ಬಹಳಷ್ಟು ಜನರು ಮಾತನಾಡಿದ್ದಾರೆ. ಆ ವಿಚಾರದಲ್ಲಿ ನಾಲ್ಕು ಮಾತುಗಳನ್ನು ಸ್ವಲ್ಪ ತಡೆದು ನಾನು ಹೇಳುತ್ತೇನೆ. ಅದಕ್ಕೆ ಮೊದಲು ಪ್ರಾರಂಭದಲ್ಲಿ ಈ ಮುಂಗಡ ಪತ್ರದ ಮೇಲೆ ಸಾಮಾನ್ಯವಾದಂಥ ಮೂರು ತರಹ ಟೀಕೆ ಬಂದಿದ್ದನ್ನು ಪ್ರಸ್ತಾಪಿಸಲು ಬಯಸುತ್ತೇನೆ. ಮೊದಲನೆಯ ಟೀಕೆ ಈ ಮುಂಗಡ ಪತ್ರ ಕೆಲವು ದೋಷಗಳಿಂದ ಕೂಡಿದ್ದರೂ ಅದನ್ನು ಒಳ್ಳೆಯ ಶೈಲಿಯಲ್ಲಿ ಬರೆದು ಅದನ್ನು ಸುಂದರವಾಗಿ ಕಾಣುವಹಾಗೆ ಮಾಡಿದ್ದಾರೆ ಎಂದು ಹೇಳತಕ್ಕದ್ದು. ಈ ಮುಂಗಡ ಪತ್ರವನ್ನು ನಾನು ಏನೂ ಅನಾವಶ್ಯಕವಾಗಿ ಸಿಂಗರಿಸಲಿಲ್ಲ. ಅದಕ್ಕೆ ವಸ್ತ್ರಾಭರಣ ಹಾಕಿಲ್ಲ. I have not given any ornamental touch or embroidery. ಈ ಮುಂಗಡ ಪತ್ರ ನನ್ನ ಮಾತು ಹೊಗಳಿಕೆ ಎಂದು ಯಾರೂ ತಿಳಿಯದೆ ಇದ್ದರೆ ಅದು ನಿರಾಭರಣ ಸುಂದರಿಯಾಗಿದೆ. ಸರಕಾರದ ಮುಂಗಡ ಪತ್ರ ಒಬ್ಬ ವರ್ತಕನ ವಾರ್ಷಿಕ ಬ್ಯಾಲೆನ್ಸ್‌ಷೀಟ್ ಆಗಿ ಇರಕೂಡದು, ಅದು ನಿರ್ಜೀವವಾಗಿ ಇರಕೂಡದು. ಅದರಲ್ಲಿ ಜನತೆಯ ಆಶೋತ್ತರಗಳು ಪ್ರತಿಬಿಂಬಿತವಾಗಬೇಕು. ಅದು ಸಜೀವವಾದ ಮತ್ತು ಕಾರ್ಯ ಪ್ರತಿಭೆಯನು ಹೊರಹೊಮ್ಮತಕ್ಕಂಥ ಒಂದು ಡಾಕ್ಯುಮೆಂಟ್ ಆಗಿರಬೇಕು ಮಾನ್ಯ ಸಿದ್ದವೀರಪ್ಪನವರ ತೀಕ್ಷ್ಣತೆಗೆ ಇದರಲ್ಲಿ ಯಾವುದಾದರೂ ವಿಶೇಷವಾದಂತ ದೋಷ ಇದ್ದರೆ ಅದು ಗೋಚರವಾಗದೇ ಹೋಗುತ್ತಾ, ಇರಲಿಲ್ಲ ಅವರು ಮತ್ತು ಶ್ರೀಮಾನ್ ಶಿವಪ್ಪನವರು ಇಂತಹ ಸ್ನೇಹಿತರು ಈ ಮುಂಗಡ ಪತ್ರದ ಮುಖ್ಯವಾದ ಕೆಲವು ಪ್ರಪೋಜಲ್‌ಗಳ ಮೇಲೆ ಯಾವುದೇ ರೀತಿಯ ವಿಶೇಷವಾದ ಟೀಕೆ ಮಾಡದೆ ಇನ್ನಿತರ ಕೆಲವು ವಿಷಯಗಳ ಮೇಲೆ ತಮ್ಮ ಲಕ್ಷ್ಯವನ್ನು ಕೇಂದ್ರೀಕರಿಸಿದ್ದೇ ಈ ಮುಂಗಡ ಪತ್ರಕ್ಕೆ ಒಂದು ಟ್ರಿಬ್ಯೂಟ್ ಎಂದು ನಾನು ತಿಳಿದುಕೊಳ್ಳುತ್ತೇನೆ. ಎರಡನೆಯದ ಸಾಮಾನ್ಯವಾದಂಥ ಟೀಕೆ, ಈ ಮುಂಗಡ ಪತ್ರವು ಕೇಂದ್ರ ಸರಕಾರಕ್ಕೆ, ರಾಜ್ಯ ಸರಕಾರ ಸಲ್ಲಿಸಿದಂಥ ಒಂದು ಮನವಿ ಪತ್ರವಾಗಿದೆ ಎಂದು ಹೇಳಿದುದು. ಇದು ಯಾವ ದೃಷ್ಟಿಯಲ್ಲಿ ಹೀಗಿದೆ ಎಂದು ಹೇಳಿದರೋ ನನಗೆ ಅರ್ಥವಾಗಲಿಲ್ಲ. ನಾವು ಈ ದೇಶದ ಒಂದು ಭಾಗ. ಈ ದೇಶದಲ್ಲಿ ಇರತಕ್ಕಂಥ ಕೇಂದ್ರ ಸರಕಾರ ನಮ್ಮೆಲ್ಲರ ಸರಕಾರ. ಒಂದು ದೃಷ್ಟಿಯಿಂದ ಕೆಲವು ಭಾಗಗಳಲ್ಲಿ ನಮ್ಮ ಘಟನೆಗೆ ಅನುಸಾರವಾಗಿ ರಾಜ್ಯ ಸರಕಾರ ಕೇಂದ್ರ ಸರಕಾರದ ಮೇಲೆ ಅವಲಂಬಿಸಬೇಕಾಗುತ್ತದೆ.

ಕೇವಲ 2-3 ವಿಚಾರಗಳಲ್ಲಿ ಮಾತ್ರ ನಾನು ಕೇಂದ್ರ ಸರ್ಕಾರದ ಮೇಲೆ ಸ್ವಲ್ಪ ಮಟ್ಟಿಗೆ ಭಾರ ಹಾಕುವ ಸೂಚನೆ ಮಾಡಿದ್ದೇನೆ. ಮೊದಲನೆಯದು ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯನ್ನು ಕುರಿತು, ಎರಡನೆಯದು ನಮ್ಮ ರಾಜ್ಯದಲ್ಲಿ ಸಣ್ಣ ಕೈಗಾರಿಕೆಯನ್ನು ಸ್ಥಾಪನೆ ಮಾಡುವಂಥಾದ್ದು ಕುರಿತು, ಇನ್ನು ಮೂರನೆಯದು ವ್ಯವಸಾಯ ಕೂಲಿಗಾರರಿಗೆ ಅವರು ಬೆಳೆದಂತಹ ಪದಾರ್ಥಗಳಿಗೆ ಸಾಕಷ್ಟು ಆಕರ್ಷಕವಾಗಿರುವಂತ ಬೆಲೆ ಕೊಡುವ ವಿಚಾರವನ್ನು ಕುರಿತು ಈ ಮೂರು ವಿಚಾರಗಳಲ್ಲಿ ರಾಜ್ಯ ಸರ್ಕಾರ ತಾನಾಗಿಯೇ ಏನನ್ನು ಮಾಡುವುದು ಸಾಧ್ಯವಿಲ್ಲ. ಅದ್ದರಿಂದ ಕೇಂದ್ರ ಸರ್ಕಾರಕ್ಕೆ ಒಂದು ಮೆಮೋರ್‍ಯಾಂಡಂ, ಒಂದು ಮನವಿ ಪತ್ರವನ್ನು ಸಲ್ಲಿಸಿದ ಹಾಗೆ ಈ ಬಡ್ಜೆಟ್ ಭಾಷಣ ಇತ್ತು ಎಂದು ಹೇಳಿದರು. ಅದರಲ್ಲಿ ಯಾವ ಅರ್ಥವೂ ಇಲ್ಲ ಅನಿಸುತ್ತದೆ. ಇದರಲ್ಲಿ ಸಾಮಾನ್ಯವಾಗಿ ಬಂದಂತಹ ಟೀಕೆ ಎಂದರೆ ಮುಂಗಡ ಪತ್ರದಲ್ಲಿ ಬಹಳ ಉನ್ನತವಾದ ಮತ್ತು ಉದಾತ್ತವಾದ ವಿಚಾರಗಳು ಏನಿವೆ ಅವುಗಳನ್ನು ಕಾರ್ಯಗತ ಮಾಡತಕ್ಕಂಥ ಯಾವ ಸೂಚನೆಯೂ ಇದರಲ್ಲಿ ಇಲ್ಲ ಎಂದು ಹೇಳಿದರು. ಮುಂಗಡ ಪತ್ರ ನಾವು ಕಾರ್ಯಗತ ಮಾಡುವ ಕೆಲಸಗಳ ಒಂದು ವರದಿಯಲ್ಲ. ಸ್ವಲ್ಪಮಟ್ಟಿಗೆ ಹಿಂದೆ ನಾವು ಮಾಡಿದಂತಹ ಸಾಧನೆಯ ಪರಿಚಯ ಇದರಲ್ಲಿ ಸಿಕ್ಕುತ್ತದೆ. ಆದರೆ ಅದಕ್ಕಿಂತ ಹೆಚ್ಚಿಗೆ ಮುಂದೆ ನಾವು ಮಾಡಬೇಕಾದ ಕಾರ್ಯಗಳ ಸಂಕಲ್ಪವನ್ನೂ ಇದು ಸೂಚಿಸುತ್ತದೆ. ನಾನು ಇವೊತ್ತಿನವರೆಗೂ ಮುಂಗಡ ಪತ್ರದಲ್ಲಿ ಯಾವುದೇ ರೀತಿಯ ಒಂದು ಮುಚ್ಚು ಮರೆ ಮಾಡುವಂಥಾ ಪ್ರಯತ್ನಕ್ಕೆ ಕೈ ಹಾಕಿಲ್ಲ. ಅದ್ದರಿಂದ ರಾಜ್ಯಕ್ಕೆ ಸರ್ಕಾರಕ್ಕೆ ಲಾಭವಾಗಿದೆ. ಸರಕಾರದ ನಿಜವಾದ ಆರ್ಥಿಕ ಸ್ಥಿತಿಯನ್ನು ಸರ್ಕಾರ ಎದುರಿಸಬೇಕಾದರೆ ಅನೇಕ ಸಮಸ್ಯೆಗಳ ವಿಚಾರದಲ್ಲಿ ಈ ಮಾನ್ಯ ಸಭೆಯ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಹೋದರೆ ಇನ್ನು ಯಾರನ್ನು ತೆಗೆದುಕೊಳ್ಳಬೇಕು ? ಅದ್ದರಿಂದ ಈ ಮುಂಗಡ ಪತ್ರ, ಹಿಂದಿನ ಮುಂಗಡ ಪತ್ರ

(ಶ್ರೀ ರಾಮಕೃಷ್ಣ ಹೆಗಡೆ)

ನಮ್ಮ ರಾಜ್ಯದ ಆರ್ಥಿಕ ಸ್ಥಿತಿಯ ಒಂದು ನಿಜವಾದಂತಹ ಚಿತ್ರವನ್ನು ಕೊಡುತ್ತದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇಲ್ಲಿಯವರೆಗೂ ನಮ್ಮ ಮೈಸೂರು ರಾಜ್ಯವನ್ನು ಸೇರಿಸಿ ನಮ್ಮ ದೇಶದಲ್ಲಿ 9 ರಾಜ್ಯಗಳಲ್ಲಿ ಈಗಾಗಲೇ ಮುಂಗಡ ಪತ್ರವನ್ನು ಮಂಡಿಸಿದ್ದಾರೆ. ಇದರಲ್ಲಿ ಈ ಸಲ ಒಂದು ವೈಶಿಷ್ಟ್ಯ ಎದ್ದು ಕಾಣುತ್ತಿದೆ. ಅದು ಏನೆಂದರೆ ಎಲ್ಲಾ ರಾಜ್ಯಗಳ ಎಲ್ಲಾ ಮುಂಗಡ ಪತ್ರಗಳು ಮತ್ತು ಕೇಂದ್ರ ಸರ್ಕಾರದ ಮುಂಗಡ ಪತ್ರ ಕೂಡ ಕೊರತೆಯ ಮುಂಗಡ ಪತ್ರಗಳಾಗಿವೆ. ಇದರಲ್ಲಿ ಆರ್ಥಿಕವಾಗಿ ಬಲಹೀನವಾಗಿರತಕ್ಕಂಥ ರಾಜ್ಯಗಳು ಮತ್ತು ಆರ್ಥಿಕವಾಗಿ ಸ್ವಶಕ್ತಿಯಿಂದ ಬಲಾಢ್ಯವಾಗಿರತಕ್ಕದ್ದು ಯಾವುದು ಭೇದ ಇಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ಎಕ್ಸೆಪ್ಟ್ ಆಂಧ್ರ.

ಶ್ರೀ ರಾಮಕೃಷ್ಣ ಹೆಗಡೆ.—ಅಲ್ಲಿಕೂಡ ರೆವಿನ್ಯೂ ಸರ್‌ಪ್ಲಸ್ ಆಗಿದ್ದರೂ ಸಹ ಒಟ್ಟಿನಲ್ಲಿ ಡಿಫಿಸಿಟ್ ಬಡ್ಜೆಟ್ ಆಗಿದೆ. ಎಲ್ಲಾ ರಾಜ್ಯಗಳ ಒಟ್ಟು ಖೋತಾ ಮುಂಗಡ ಪತ್ರದ ಪ್ರಕಾರ ನೋಡಿದರೆ ಸುಮಾರು 80 ಕೋಟಿ ರೂಪಾಯಿಗಳಾಗುತ್ತದೆ. ಇನ್ನೂ ಉಳಿದ ರಾಜ್ಯಗಳ ಮುಂಗಡ ಪತ್ರಗಳು ಬರುತ್ತವೆ. ಮಾನ್ಯ ಸದಸ್ಯರಿಗೆ ಈ ವಿಚಾರದಲ್ಲಿ ನಾನು ಸ್ಪಷ್ಟೀಕರಣ ಹೇಳುವುದು ಅಗತ್ಯವಿಲ್ಲ. ಯಾವುದೇ ಒಂದು ಮುಂಗಡ ಪತ್ರ ಕೊರತೆಯ ಮುಂಗಡ ಪತ್ರ ಆದದ್ದು ಅನೇಕ ಕಾರಣಗಳಿಂದ ಅದು ಕೆಟ್ಟ ಮುಂಗಡ ಪತ್ರ ಆಗುವುದಿಲ್ಲ. ನಮ್ಮ ಅಭಿವೃದ್ಧಿ ಕಾರ್ಯಕ್ರಮಗಳು ಬೆಳೆಯುತ್ತಾ ಹೋದ ಹಾಗೆ ಆರ್ಥಿಕ ಅವಶ್ಯಕತೆಯೂ ಅಷ್ಟೇ ಹೆಚ್ಚಾಗಿರುತ್ತದೆ. ಮತ್ತು ಎಲ್ಲಿಯವರೆಗೆ ನಾವು ವಿವಿಧ ಅಭಿವೃದ್ಧಿ ಕಾರ್ಯಗಳಲ್ಲಿ ಹಾಕಿದಂತಹ ಹಣ ನಮಗೆ ಪ್ರತಿಫಲ ಕೊಡಲು ನಾವು ಪ್ರಯತ್ನ ಮಾಡುವುದಿಲ್ಲ ಅಲ್ಲಿಯವರೆಗೆ ಬಹಳ ಮಟ್ಟಿಗೆ ಕೊರತೆಯ ಮುಂಗಡ ಪತ್ರ ಅನಿವಾರ್ಯವಾಗುತ್ತದೆ. ರೆವಿನ್ಯೂ ಸರ್‌ಪ್ಲಸ್ ಕೆಲವು ರಾಜ್ಯಗಳಲ್ಲಿ ಇದೆ ನಮ್ಮ ರಾಜ್ಯದಲ್ಲಿ ಮೊನ್ನೆ ಮೊನ್ನೆ ರೆವಿನ್ಯೂ ಸರ್‌ಪ್ಲಸ್ ಇತ್ತು. ಕೆಲವು ವರ್ಷಗಳಿಂದ ರೆವಿನ್ಯೂ ಸರ್‌ಪ್ಲಸ್ ಕಡಿಮೆಯಾಗಿದೆ. ಎಲ್ಲಿ ಸರ್‌ಪ್ಲಸ್ ರೆವಿನ್ಯೂ ಇದೆಯೋ ಅಲ್ಲಿಯೂ ಕೂಡ ಅಭಿವೃದ್ಧಿ ಕಾರ್ಯಗಳನ್ನು ಗಣನೆಗೆ ತೆಗೆದುಕೊಂಡರೆ ಒಟ್ಟು ಓವರ್ ಆಲ್ ಪೊಜಿಷನ್ ತೆಗೆದುಕೊಂಡರೆ ಕೊರತೆಯಾಗುತ್ತದೆ. ಕೇಂದ್ರ ಸರ್ಕಾರ ಹೆಚ್ಚಿನ ಕರಭಾರವನ್ನು ಹಾಕಿಯೂ ಸುಮಾರು 225 ಕೋಟಿ ರೂಪಾಯಿಗಳ ಕೊರತೆಯ ಮುಂಗಡ ಪತ್ರವಾಗಿದೆ. ಅದರ ಜೊತೆಗೆ 9 ರಾಜ್ಯಗಳ ಮುಂಗಡ ಪತ್ರದಲ್ಲಿ ಆಗಿರತಕ್ಕಂಥ ಒಟ್ಟು ಕೊರತೆಯನ್ನು ಸೇರಿಸಿದರೆ 80 ಕೋಟಿ ರೂಪಾಯಿಗಳಾಗುತ್ತದೆ. ಇನ್ನು ಮುಂದೆ ಕೆಲವು ರಾಜ್ಯಗಳು ತಮ್ಮ ಮುಂಗಡ ಪತ್ರವನ್ನು ಮಂಡಿಸಬೇಕಾಗಿದೆ. ಆ ರಾಜ್ಯಗಳ ಖೋತಾವನ್ನು ಸೇರಿಸಿದರೆ ಅದು 50 ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗುತ್ತದೆಯೋ ಏನೋ ಗೊತ್ತಿಲ್ಲ. ಸುಮಾರು 400 ಕೋಟಿ ರೂಪಾಯಿಗಳ ಡಿಫಿಸಿಟ್ ಅನ್ನು ನಾವು ಅನುಭವಿಸಬೇಕಾಗುತ್ತದೆ ಎಂದು ನನಗೆ ಅನಿಸುತ್ತದೆ. ಇದು ದೇಶದ ಆರ್ಥಿಕ ಆರೋಗ್ಯ ದೃಷ್ಟಿಯಿಂದ ಅಷ್ಟೊಂದು ಸರಿಯಲ್ಲ ಎಂದು ನನಗೆ ಅನಿಸುತ್ತದೆ. ಆದರೆ ಇದರ ಬಗ್ಗೆ ನಾವು ಎಚ್ಚರಿಕೆಯಿಂದ ಇರಬೇಕು. ಇನ್‌ಫ್ಲೇಷನ್ ಆಗದಂತೆ ಸೂಕ್ತ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸೇರಿ ಕೈಗೊಳ್ಳಬೇಕು ಎಂದು ನನಗೆ ಅನಿಸುತ್ತದೆ. ಈಗ ಮುಂಗಡ ಪತ್ರದಲ್ಲಿ ಸುಮಾರು $5\frac{1}{2}$ ಕೋಟಿ ರೂಪಾಯಿಗಳ ಆದಾಯ ಬರತಕ್ಕಂಥ ಕೆಲವೊಂದು ಟ್ಯಾಕ್ಸೇಷನ್ ಸೂಚನೆಯನ್ನು ನಾನು ಮಾಡಿದ್ದೇನೆ. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಕರಭಾರವನ್ನು ಹೆಚ್ಚು ಮಾಡುತ್ತಾ ಹೋಗುವುದರಿಂದ ನಮ್ಮ ಅಭಿವೃದ್ಧಿ ಆಗುವುದಿಲ್ಲ ಎಂದಲ್ಲ. ಕರದಿಂದ ಒಳ್ಳೆಯ ಪರಿಣಾಮಗಳೂ ಆಗುತ್ತದೆ. ದುಷ್ಪರಿಣಾಮ ಕೂಡ ಜಾಗ್ಗೆ ಆಗುತ್ತದೆ. ಅತಿಪ್ರಸರಣಕ್ಕೆ ಅವಕಾಶ ಕೊಡದಂತೆ ಸಾಕಷ್ಟು ಜಾಗರೂಕತೆಯಿಂದ ಕರವನ್ನು ಹಾಕಿ ಅದನ್ನು ನಿಗ್ರಹಿಸಬೇಕು. ಮತ್ತು ಎಚ್ಚರಿಕೆಯಿಂದ ಕರವನ್ನು ಹಾಕದೆ ಸಿಕ್ಕಾಪಟ್ಟೆ ಕರಹಾಕಿದರೆ ಅತಿಪ್ರಸರಣಕ್ಕೆ ಉತ್ತೇಜನ ಕೊಟ್ಟು ಆಗ ಅತಿಪ್ರಸರಣ ಕೂಡ ಆಗಬಹುದು.

ನಾನು ಸೂಚನೆ ಮಾಡಿದಂತಹ ಟ್ಯಾಕ್ಸೇಷನ್ ಪ್ರಪೋಜಲ್ಸ್‌ನಲ್ಲಿ ಅರ್ಬನ್ ಪ್ರಾಪರ್ಟಿ ಟ್ಯಾಕ್ಸ್ ವಿಚಾರವಾಗಿ ನಾನು ಪುನಃ ಯೋಚನೆ ಮಾಡುವುದಕ್ಕೆ ಬಯಸುತ್ತೇನೆ. ಕೇಂದ್ರ ಸರ್ಕಾರದ ಮುಂಗಡ ಪತ್ರ ಬಂದಿರುವುದರಿಂದ ಅದರ ಪರಿಣಾಮ ಇದರ ಮೇಲೆ ಎಷ್ಟರಮಟ್ಟಿಗೆ ಆಗುತ್ತದೆ, ಮತ್ತು ಇವೆರಡನ್ನು ಸೇರಿಸಿದರೆ ಜನರಮೇಲೆ ಏನು ಪರಿಣಾಮವಾಗುತ್ತದೆ ಅದನ್ನು ನೋಡಿ ಇದರಲ್ಲಿ ಸ್ವಲ್ಪಮಟ್ಟಿಗೆ ಏರ್ಪಾಡು ಮಾಡತಕ್ಕ ಅಗತ್ಯ ಇದೆ. ಅದನ್ನು ಮಾಡಲು ನಾನು ಸಿದ್ಧನಾಗಿದ್ದೇನೆ ಎಂದು ನಾನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ. ಇದೇರೀತಿ ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ ಕೇಂದ್ರ ಸರ್ಕಾರ ಪರಿಚಯ ನಮಗೆ ಆದಮೇಲೆ ಕೆಲವು ಭಾಗಗಳಲ್ಲಿ

ಟ್ಯಾಕ್ಸ್ ಅನ್ನು ಏನು ಸೂಚನೆ ಮಾಡಿದ್ದೇನೆ ಅದನ್ನು ಸ್ವಲ್ಪ ಮಟ್ಟಿಗೆ ವ್ಯತ್ಯಾಸ ಮಾಡತಕ್ಕ ಅಗತ್ಯ ಬರಬಹುದು. ಇದಕ್ಕೆ ಸಂಬಂಧಪಟ್ಟ ಬಿಲ್ಲನ್ನು ಇನ್ನು ಕೆಲವೇ ದಿವಸಗಳಲ್ಲಿ ನಾನು ಈ ಸಭೆಯ ಮುಂದೆ ಇಡುತ್ತೇನೆ. ಇದರ ಬಗ್ಗೆ ಆಗ ಚರ್ಚೆ ಮಾಡೋಣ ಎಂದು ನಾನು ಸೂಚನೆ ಮಾಡುತ್ತೇನೆ. ಆದರೆ ಸಾಮಾನ್ಯವಾಗಿ ಕರದ ವಿಚಾರದಲ್ಲಿ ಇನ್ನೊಂದು ಮಾತನ್ನು ಹೇಳುವುದಾದರೆ, ನಮ್ಮ ಅಭಿವೃದ್ಧಿ ಕೆಲಸ ಬೆಳೆದು, ಆದರಿಂದ ಜನರ ಕೈಯ್ಯಲ್ಲಿ ಹೆಚ್ಚು ಹೆಚ್ಚು ಉತ್ಪಾದನೆ ಆದಾಗ, ಶಹರ್‌ವಾಸಿಗಳ ಕೈಯ್ಯಲ್ಲಾಗಲಿ, ಅಥವಾ ಗ್ರಾಮವಾಸಿಗಳ ಕೈಯ್ಯಲ್ಲಾಗಲಿ, ಬಂದಾಗ, ಅದರಲ್ಲಿ ಕೆಲವು ಭಾಗವನ್ನಾದರೂ ನಮ್ಮ ಮುಂದಿನ ಕಾರ್ಯಕ್ರಮಗಳಿಗೆ ಉಪಯೋಗಿಸುವುದು ಅತ್ಯಗತ್ಯವೆಂದು ಹೇಳುತ್ತೇನೆ.

ಮಾನ್ಯ ಸಿದ್ಧವೀರಪ್ಪನವರು ತಮ್ಮ ಭಾಷಣದಲ್ಲಿ ಸೆಂಟ್ರಲ್ ಬಜೆಟಿನಿಂದ ನೀವು ಸ್ಫೂರ್ತಿ ಪಡೆಯಬೇಕಾಗಿತ್ತು ಎಂದು ಹೇಳಿದರು. ದುರ್ದೈವದಿಂದ ನಮ್ಮ ಬಜೆಟ್ ಮೊದಲಾಯಿತು, ಕೇಂದ್ರದ ಬಜೆಟ್ ಆಮೇಲೆ ಬಂತು. ಅದಕ್ಕಾಗಿ ಸ್ಫೂರ್ತಿ ಆಮೇಲೆ ಸಿಕ್ಕಿದೇ ಹೊರತು ಮೊದಲು ಸಿಕ್ಕಲಿಲ್ಲ. ಆದರೆ ಮಾನ್ಯ ಸಿದ್ಧವೀರಪ್ಪನವರಿಗೆ ಮೂರು ನಾಲ್ಕು ಉದಾಹರಣೆಗಳನ್ನು ಕೊಡುತ್ತೇನೆ. ಅದನ್ನು ಕೇಳಿದ ಮೇಲೆ ಯಾರಿಂದ ಯಾರು ಸ್ಫೂರ್ತಿ ಪಡೆಯಬೇಕಾಗಿತ್ತು ಎಂದು ಅವರೇ ಹೇಳಲಿ. ಉದಾಹರಣೆಗೆ ಮಾನ್ಯ ಪ್ರಧಾನ ಮಂತ್ರಿಯವರು ತಮ್ಮ ಬಜೆಟ್ ಭಾಷಣದಲ್ಲಿ 5 ಮಹತ್ವವಾದಂತಹ ಕಾರ್ಯಕ್ರಮಗಳನ್ನು ಸೂಚನೆ ಮಾಡಿದ್ದಾರೆ. ಅದರಲ್ಲಿ ಮೊದಲನೆಯದು :

Special Schemes for small farmers are being taken up in 45 Districts and research on dry farming techniques is being accelerated. ಇದು ಒಂದು ಹೊಸ ವಿಚಾರವೇನೂ ಅಲ್ಲ. ಕಳೆದ ಎರಡು ವರ್ಷಗಳಿಂದಲೂ ನಾವು ಪ್ಲಾನಿಂಗ್ ಕಮಿಶನ್ ಜೊತೆಗೆ ಚರ್ಚೆ ಮಾಡುತ್ತಿದ್ದೇವೆ. ಮತ್ತು ಮಾನ್ಯ ಸದಸ್ಯರಿಗೆ ಗೊತ್ತಿರಬಹುದು ಸುಮಾರು ನಾಲ್ಕಾರು ವರ್ಷಗಳಿಂದಲೂ ನಾವು ನೀರಾವರಿ ಅನುಕೂಲವಿಲ್ಲದಂತಹ ಮತ್ತು ಪದೇ ಪದೇ ಕ್ಷಾಮ ಪರಿಸ್ಥಿತಿಗೆ ಒಳಗಾಗುವಂತಹ ಪ್ರದೇಶಗಳ ಅಭಿವೃದ್ಧಿಗಾಗಿ ಒಂದು 280 ಕೋಟಿ ರೂಪಾಯಿಯ ಸ್ಕೀಂ ತಯಾರು ಮಾಡಿ ಪ್ಲಾನಿಂಗ್ ಕಮೀಷನ್ನಿಗೆ ಮತ್ತು ಕೇಂದ್ರ ಸರ್ಕಾರಕ್ಕೆ 5-6 ವರ್ಷಗಳ ಹಿಂದೆಯೇ ಕಳಿಸಿಕೊಟ್ಟಿದ್ದೇವೆ. ಈಗ ಪ್ಲಾನಿಂಗ್ ಕಮೀಶನ್ನಿನವರು ಒಂದು ಪ್ರಾಯೋಗಿಕ ಆಧಾರದ ಮೇಲೆ ಇಡೀ ದೇಶದಲ್ಲಿ 45 ಜಿಲ್ಲೆಗಳನ್ನು ತೆಗೆದುಕೊಳ್ಳಬೇಕು, ಅದರಲ್ಲೂ ಮುಖ್ಯವಾಗಿ ಸಣ್ಣ ಸಣ್ಣ ರೈತರ ಆರ್ಥಿಕ ಅಭಿವೃದ್ಧಿಗೆ ಸಂಯುಕ್ತವಾದ ಒಂದು ಯೋಜನೆಯನ್ನು ಮಾಡಬೇಕೆಂಬು ದನ್ನು ಒಪ್ಪಿಕೊಂಡರು ಮತ್ತು ನಮ್ಮ ರಾಜ್ಯದಲ್ಲಿ ಎರಡು ಜಿಲ್ಲೆಗಳನ್ನು ನಾವು ಆರಿಸಿದ್ದೇವೆ, ಒಂದು ಬಿಜಾಪುರ ಮತ್ತೊಂದು ಮೈಸೂರು. ಇದರ ಹೊರತು ಇನ್ನೂ ನಾಲ್ಕು ಜಿಲ್ಲೆಗಳನ್ನು ಸೇರಿಸ ಬೇಕೆಂದು ತಿಳಿಸಿದ್ದೇವೆ. ಆದ್ದರಿಂದ ಈ ವಿಚಾರ ಏನಿವೆ, ಇದು ಹೊಸತಾದ ವಿಚಾರವಲ್ಲ. ಎರಡನೇ ವಿಚಾರ ಪ್ರಸ್ತಾಪಿಸಿರುವುದು 25 ಕೋಟಿ ರೂಪಾಯಿಯನ್ನು ಯಾವ ಪ್ರದೇಶದಲ್ಲಿ ಪದೇ ಪದೇ ಕ್ಷಾಮ ಬರುತ್ತದೆ, ಅದರ ಅಭಿವೃದ್ಧಿಗಾಗಿ, ತೆಗೆಸಿರುತ್ತೇವೆಂದು ಹೇಳಿದರು. ಅದು ಬಹಳ ಸಂತೋಷದ ವಿಚಾರ. ಈ ವಿಚಾರದಲ್ಲಿ ಕೂಡ ನಾನು ಆಗಲೇ ಹೇಳಿದ್ದೇನೆ. ಈ ವಿಚಾರ ದಲ್ಲೂ 280 ಕೋಟಿ ರೂಪಾಯಿ ಯೋಜನೆ ನಾವು ತಯಾರು ಮಾಡಿದ್ದೇವೆ. ಆದರೆ ದುರ್ದೈವ ದಿಂದ ಪ್ಲಾನಿಂಗ್ ಕಮೀಶನಿನವರು ಚರ್ಚೆ ಮಾಡಿ, ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯಲ್ಲೂ ಚರ್ಚೆಯಾದರೂ ದುಡ್ಡಿಲ್ಲವೆಂದು ಅವರು ಯಾವುದೇ ನಿರ್ದಿಷ್ಟವಾದ ಸಹಾಯವನ್ನು ಕೊಡುವುದಕ್ಕೆ ಒಪ್ಪಲಿಲ್ಲ. ನಾವು ನಮ್ಮ ರಾಜ್ಯದಲ್ಲಿ ಕಳೆದ 8-10 ವರ್ಷಗಳಲ್ಲಿ ಸ್ಕೀಂ ತಯಾರು ಮಾಡಿದ್ದು 1963ನೇ ಇಸವಿಯಲ್ಲಿ ಮೈಸೂರು ರಾಜ್ಯದ 13 ಜಿಲ್ಲೆಗಳ ಸುಮಾರು 74 ತಾಲ್ಲೂಕು ಗಳು. ಮಳೆಯ ಅಭಾವದಿಂದ, ನೀರಾವರಿ ಅನುಕೂಲವಿಲ್ಲದೆ ಇರುವುದರಿಂದ ಪದೇ ಪದೇ ಕ್ಷಾಮದ ಪರಿಸ್ಥಿತಿಗೆ ಈಡಾಗುತ್ತದೆ. ಇದರ ಅಭಿವೃದ್ಧಿಗಾಗಿ ನಾವು ಈ ಪ್ರದೇಶದಲ್ಲಿ ಎಷ್ಟು ಖರ್ಚು ಮಾಡಿದ್ದೇವೆಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇವೆ. ಈ ಕಾರ್ಯಕ್ರಮದಲ್ಲಿ ಏನೇನು ಸೇರುತ್ತದೆ ಅಂದರೆ, ಸಾಯಿಲ್ ಕನ್‌ಸರ್ವೇಶನ್, ಮೈನರ್ ಇರಿಗೇಶನ್, ಡೈವರ್ಸಿಫಿಕೇಶನ್ ಆಫ್ ಅಗ್ರಿಕಲ್ಚರ್ ತ್ರೂ ದಿ ಎನ್‌ಕರೇಜ್‌ಮೆಂಟ್ ಆಫ್ ಡೈರಿಯಿಂಗ್, ಫಾರ್ಮಿಂಗ್, ಷೀಪ್ ಬ್ರೀಡಿಂಗ್ ಫಿಶರೀಸ್, ಪೌಲ್ಟ್ರಿ, ಇತ್ಯಾದಿ, ಅಫೊರೆಸ್ಟೇಷನ್, ಅಗ್ರೋ ಇಂಡಸ್ಟ್ರೀಸ್ ಮತ್ತು ಮಾರ್ಕೆಟಿಂಗ್. ಇವುಗಳಲ್ಲಿ ಮೈನರ್ ಇರಿಗೇಶನ್ ಬಗ್ಗೆ 40 ಕೋಟಿ ರೂಪಾಯಿ ನಾವು ಖರ್ಚು ಮಾಡಿದ್ದೇವೆ. ಮತ್ತು ಇರಿಗೇಷನ ವೆಲ್ಸ್, ಕಮ್ಯೂನಿಟಿ ಡೆವಲಪ್‌ಮೆಂಟ್ ಬಜೆಟ್‌ನಲ್ಲಿ ಮತ್ತು ಲಬರೈಜ್ಡ್ ರೂಲ್ಸ್ ಅದರ ಕೆಳಗಡೆ ಸುಮಾರು 10 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಲ್ಯಾಂಡ್ ಡೆವಲಪ್ ಮೆಂಟ್ ಬ್ಯಾಂಕ್ ಮುಖಾಂತರವಾಗಿ 15 ಕೋಟಿ ರೂಪಾಯಿಗಳನ್ನು ಈ ಏರಿಯಾದಲ್ಲಿ ಸಾಲ ಕೊಟ್ಟು, ಖರ್ಚು ಮಾಡಿದ್ದೇವೆ. ಆಮೇಲೆ ಸಾಯಿಲ್ ಕನ್‌ಸರ್ವೇಷನ್‌ಗಾಗಿ 6 ಕೋಟಿ

ಕರ್ನಾಟಕ ವಿಧಾನಮಂಡಲ ಗ್ರಂಥಾಲಯ, ಬೆಂಗಳೂರು. Bangalore. Date.........

(ಶ್ರೀ ರಾಮಕೃಷ್ಣ ಹೆಗಡೆ)

ರೂಪಾಯಿ ಈ ಪ್ರದೇಶದಲ್ಲಿ ಖರ್ಚು ಮಾಡಿದ್ದೇವೆ. ಮತ್ತು ರೂರಲ್ ಇಲೆಕ್ಟ್ರಿಫಿಕೇಷನ್, ಪಂಪ್ ಸೆಟ್ ಮೊದಲಾದುವುಗಳನ್ನು ಕೊಡುವುದಕ್ಕೆ 20ಕೋಟಿ ರೂಪಾಯಿ ಈ ಪ್ರದೇಶದಲ್ಲಿ ಖರ್ಚು ಮಾಡಿದ್ದೇವೆ. ಮತ್ತು ಖಾಸಗೀಯಾಗಿ ಪಂಪ್‌ಸೆಟ್ ಖರೀದಿ ಮಾಡುವವರಿಗೆ, ಸಾಲ ಕೊಡವುದಕ್ಕೆ ಬೇರೆ ಬೇರೆ ಆರ್ಥಿಕ ಸಂಸ್ಥೆಗಳ ಮುಖಾಂತರ ನಾವು ಖರ್ಚು ಮಾಡಿರುವುದು 15 ಕೋಟಿ ರೂಪಾಯಿ. ಆದ್ದರಿಂದ ಮಾನ್ಯ ಸದಸ್ಯರಿಗೆ ಹೇಳುತ್ತೇನೆ ಈ ವಿಚಾರದಲ್ಲಿ ಕೂಡ ಕೇಂದ್ರ ಸರ್ಕಾರದವರಿಂದ ಇದು ಹೊಸದಾಗಿ ಬಂದುದೇನಲ್ಲ. ನಾವು ಕಳೆದ ಅನೇಕ ವರ್ಷಗಳಿಂದ ಚರ್ಚೆ ಮಾಡುತ್ತಿರುವುದನ್ನು ಅವರು ಸ್ವಲ್ಪಮಟ್ಟಿಗೆ ಒಪ್ಪಿಕೊಂಡಿದ್ದಾರೆಂಬುದು ಬಹಳ ಸಂತೋಷ. ಇನ್ನು ಮೂರನೇಯದು ಅರ್ಬನ್ ಡೆವಲಪ್‌ಮೆಂಟ್ ಕಾರ್ಪರೇಷನ್. ನನ್ನ ಬಜೆಟ್‌ಭಾಷಣ ನೋಡಿದರೆ, ನಾನು ಅದರಲ್ಲಿ ಸೂಚನೆ ಮಾಡಿದ್ದೇನೆ. ಕೇಂದ್ರ ಬಜೆಟಿಗಿಂತ ಮೊದಲು ನಾನು ಭಾಷಣ ಮಾಡಿದ್ದೇನೆ. ಅರ್ಬನ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡುವಂತಹ ಉದ್ದೇಶ ನಾನು ಹೇಳಿದ್ದೇನೆ. ಇದಕ್ಕೆ ಕೇಂದ್ರಸರ್ಕಾರದವರು 10 ಕೋಟಿ ರೂಪಾಯಿ ಷೇರ್ ಭಂಡವಾಳ ಹಾಕಿ ಪ್ರಾರಂಭ ಮಾಡುತ್ತಾರೆ, ಅದು ಸಂತೋಷ. ಅದರಿಂದ ಏನಾದರೂ ಪ್ರಯೋಜನ ಸಿಗುವುದಾದರೆ, ನಾವು ಪಡೆದುಕೊಳ್ಳುತ್ತೇವೆಂದು ನಾನು ಹೇಳುತ್ತೇನೆ. ಇದಾದಮೇಲೆ......Drinking water wells substantial provision has been made in the Fourth Five Year Plan for the supply of drinking water. I have written to the Chief Ministers that the bulk of the provision should be used to provide drinking water to those areas which had no easy access to this basic requirement rather than improve existing facilities in bigger towns. ಈ ಕುಡಿಯುವ ನೀರಿನ ವ್ಯವಸ್ಥೆ ನಮ್ಮ ಸಣ್ಣ ಸಣ್ಣ ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಸರಿಯಾಗಿ ಆಗಬೇಕೆಂದು ಕಳೆದ 3 ವರ್ಷಗಳಲ್ಲಿ ಎಷ್ಟು ಖರ್ಚು ಮಾಡಿದ್ದೇವೆಂದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಗಾಂಧಿ ಶತಾಬ್ಧಿಯ ನಿಮಿತ್ತ ಸುಮಾರು ಒಂದೂವರೆ ಕೋಟಿ ರೂಪಾಯಿ ಬಜೆಟ್ ಸ್ಯಾಂಕ್ಷನ್‌ಗಿಂತ ಹೆಚ್ಚಾಗಿ ಖರ್ಚು ಮಾಡಿದ್ದೇವೆ. ಮತ್ತು ಸಿಟಿಯಲ್ಲಿ ಶುದ್ಧ ನೀರಿನ ಪೂರೈಕೆಗೆ ಎಷ್ಟು ಖರ್ಚು ಮಾಡಿದ್ದೇವೆಂಬುದನ್ನು ನಾನು ಪ್ರಸ್ತಾಪ ಮಾಡಿದ್ದೇನೆ.

ಇನ್ನು ಮುಂದಿನದು ಇಂಡಸ್ಟ್ರಿಯಲ್ ಕೆಲಸಗಾರರಿಗೋಸ್ಕರ ಮತ್ತು ಬೇರೆ ಬೇರೆ ತರದ ನೌಕರರಿಗೆ ಪ್ರೊವಿಡೆಂಟ್ ಫಂಡ್ ಸ್ವಲ್ಪ ಹೆಚ್ಚು ಮಾಡಬೇಕೆಂದು ಹೇಳಿದ್ದಾರೆ. ಅದು ನಮ್ಮ ಕೈಯ್ಯಲ್ಲಿ ಇಲ್ಲ, ಅದು ಕೇಂದ್ರಸರ್ಕಾರದ ಕೆಲಸ.

ಕೊನೆಯದಾಗಿ ಏನೆಂದರೆ, Minimum pension as also family penson for Central Government empoyees is proposed to be increased to Rs. 40 per month. ಈ ವಿಚಾರದಲ್ಲೂ ಕೂಡ ನಾನು ಪ್ರಧಾನ ಮಂತ್ರಿಯವರ ಭಾಷಣವನ್ನು ಟೀಕೆ ಮಾಡುತ್ತೇನೆಂದು ತಿಳಿಯಬಾರದು. ನಾವು ಏನು ಮಾಡಿದ್ದೇವೆ, ಅದಕ್ಕಿಂತ ಮೊದಲೇ .. ..

ಶ್ರೀ ಎಚ್. ಸಿದ್ಧವೀರಪ್ಪ.—ಈಗ ನೋಡಿದರೆ ಪ್ರಧಾನ ಮಂತ್ರಿಯವರು ಬಹಳ ನಿಮಗೆ ಹತ್ತಿರ ಇದ್ದಾರೆಂದು ಅರ್ಥವಾಗುತ್ತದೆ, ನಿಮ್ಮಷ್ಟು ಹತ್ತಿರ ನಿಮ್ಮ ಮುಖ್ಯಮಂತ್ರಿಯವರೂ ಇದ್ದರೆ ಒಳ್ಳೆಯದು.

7-00 P. M.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಿಗೆ ನೆನಪಿದೆಯೋ ಇಲ್ಲವೋ ಗೊತ್ತಿಲ್ಲ. ಮೈಸೂರು ರಾಜ್ಯದಲ್ಲಿ ನಿವೃತ್ತಿ ವೇತನ ಪಡೆಯುವರಿಗೆ ಮಿನಿಮಂ ಪೆನ್‌ಷನ್ ತಿಂಗಳಿಗೆ ಸಿಗಬೇಕು ಅದನ್ನು ನಿಗದಿ ಮಾಡುವುದರಲ್ಲಿ ಮೈಸೂರು ರಾಜ್ಯವೇ ಮೊದಲನೆಯದು ಕನಿಷ್ಠ ನಿವೃತ್ತಿ ವೇತನ ಎಲ್ಲರಿಗೂ ಸಿಗಬೇಕು ಎಂದು ಮೈಸೂರು ರಾಜ್ಯದವರೇ ಮೊಟ್ಟ ಮೊದಲ ಸಾರಿಗೆ ಮಾಡಿದ್ದರು. ಈಗ ಸೆಂಟ್ರಲ್ ಗವರ್ನಮೆಂಟಿನವರು ಕನಿಷ್ಠ ನಿವೃತ್ತಿ ವೇತನ ತಿಂಗಳಿಗೆ ನಲವತ್ತು ರೂಪಾಯಿಗಳಿರಬೇಕೆಂದು ನಿರ್ಧಾರ ಮಾಡಿದ್ದಾರೆ, ನಾವೂ ಕೂಡ ಇದನ್ನು 40 ರೂಪಾಯಿಗಳಿಗೆ ಮಾಡಬೇಕೆಂದು ಇದ್ದೇವೆ. ಆದರೆ ಏನು ಮಾಡುವುದು. ಕೇಂದ್ರದವರಲ್ಲಿ ಹೇರಳವಾಗಿ

ಕರ್ನಾಟಕ ವಿಧಾನಮಂಡಲ ಗ್ರಂಥಾಲಯ Bangalore Library

ಹಣವಿದೆ, ಅವರು ಮಾಡಿದರು. ನಾವು ಮಾಡುವುದಕ್ಕಾಗಲಿಲ್ಲ. ಇದರ ಬಗ್ಗೆ ನಾನು ಅದಕ್ಕಾಗಿ ಏನನ್ನೂ ಇಲ್ಲಿ ಪ್ರಕಟಣೆ ಮಾಡಲಿಲ್ಲ. ಆದರೂ ಇದರ ಬಗ್ಗೆ ಪರಿಶೀಲನೆ ಮಾಡಿ ಈ ಬಡ್ಜೆಟ್‌ನ ಅಧಿವೇಶನ ಮುಗಿಯುವುದರೊಳಗೇ ಇದನ್ನು ಕಚ್ಚು ಮಾಡಲು ಸಾಧ್ಯವಾದಷ್ಟು ಪ್ರಯತ್ನ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಬಹುಶಃ ಬಡ್ಜೆಟ್ ಅಧಿವೇಶನ ಮುಗಿಯುವುದರೊಳಗೆ ಈ ಅಸೆಂಬ್ಲಿಯಲ್ಲಿ ಇದರ ತೀರ್ಮಾನವೇನು ಎನ್ನುವುದನ್ನು ಹೇಳಬಯಸುತ್ತೇನೆ.

ಇನ್ನು ಕೇಂದ್ರದವರ ಬಡ್ಜೆಟ್ಟಿನಲ್ಲಿ ನಿರುದ್ಯೋಗಿ ಸಾಕ್ಷರರುಗಳಿಗೆ ನೌಕರಿಗಳನ್ನು ಕೊಡಿಸುವುದರ ಬಗ್ಗೆ ಕೆಲವು ಪರಿಹಾರಗಳನ್ನು ಸೂಚಿಸುತ್ತಿದ್ದಾರೆ. ಇದೇ ರೀತಿಯಾದ ಕೆಲವು ಕ್ರಮಗಳು ನಮ್ಮ ಬಡ್ಜೆಟ್ಟಿನಲ್ಲೂ ಇವೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇದರ ಬಗ್ಗೆ ನಾವು ಒಂದು ಸ್ಕೀಮನ್ನೂ ತಯಾರು ಮಾಡಿದ್ದೇವೆ. ಇದರ ಕಾಪಿಯನ್ನೂ ಕೇಂದ್ರಕ್ಕೂ ಕಳಿಸಿ ಅವರೂ ಕೂಡ ಇದಕ್ಕೆ ಸಹಾಯ ಮಾಡಬೇಕು ಎಂದು ಕೇಳುತ್ತೇವೆ. ಇದರಿಂದ ಸ್ವಲ್ಪಮಟ್ಟಿಗಾದರೂ ಸಹಾಯ ಸಿಗುತ್ತದೆ ಎಂದು ನಾನು ಇಲ್ಲಿ ಹೇಳಲು ಬಯಸುತ್ತೇನೆ. ಇಷ್ಟು ಹೇಳಿದ ಮೇಲೆ ಕೇಂದ್ರ ಸರಕಾರದವರ ಬಡ್ಜೆಟ್ಟಿನಿಂದ ನಮ್ಮ ಬಡ್ಜೆಟ್ಟಿನ ಮೇಲೆ ಏನು ಪರಿಣಾಮವಾಗುತ್ತದೆ. ಎನ್ನುವ ಮಾತನ್ನು ಹೇಳಲು ಇಲ್ಲಿ ವ್ಯಸನವಾಗುತ್ತದೆ. ನಮ್ಮ ಘಟನೆಯಲ್ಲಿ (ಕಾನ್‌ಸ್ಟಿಟ್ಯೂಷನ್) ಕೆಲವು ವಿಚಾರಗಳಲ್ಲಿ ಆರ್ಥಿಕ ಕ್ಷೇತ್ರದಲ್ಲಿ ಕೇಂದ್ರ ಸರಕಾರದ ಹಕ್ಕು ಯಾವುದು, ರಾಜ್ಯ ಸರಕಾರದ ಹಕ್ಕು ಯಾವುದು, ಎನ್ನುವುದನ್ನು ಹೇಳುವುದರಲ್ಲಿ ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಕೆಲವು ವಿಚಾರಗಳಲ್ಲಿ ಅದು ಸ್ಪಷ್ಟವಾಗಿ ನಿರೂಪಕವಾಗಿಲ್ಲ. ಕೇಂದ್ರ ಸರಕಾರದ ಟ್ಯಾಕ್ಸೇಷನ್ ಪ್ರಪೋಸಲ್ಸ್‌ಗಳನ್ನು ನೋಡಿದರೆ ನನಗಂತೂ ಈ ದೇಶದ ಆರ್ಥಿಕ ಮಂತ್ರಿಯಾಗಿ ಬಹಳ ದೊಡ್ಡ ಆಘಾತವಾಗಿದೆ. ನಾವೆಲ್ಲರೂ ಬಾಬುಗಳಲ್ಲಿ ಯಾವುದರಿಂದ ಹೆಚ್ಚು ಆದಾಯವನ್ನು ಗಳಿಸಬಹುದು ಎಂದು ಇದ್ದೆವೋ ಅದೇ ಬಾಬುಗಳಿಗೆ ಕೇಂದ್ರ ಸರಕಾರದವರ ಟ್ಯಾಕ್ಸ್‌ಗಳೂ ಬಿದ್ದಿವೆ. ಉದಾಹರಣೆಯಾಗಿ ಹೇಳಬೇಕಾದರೆ, ಪೆಟ್ರೋಲ್. ಇದಕ್ಕೆ ಒಂದು ಲೀಟರಿನ ಮೇಲೆ 9 ಪೈಸೆ ಕೊಡಬೇಕೆಂದು ಹಾಕಿದ್ದಾರೆ. ನಾವೂ ಕೂಡ ಇದೇ ಪೆಟ್ರೋಲ್ ಮೇಲೆ ಆಡವಲೋರೆಂ ಶೇಕಡಾ 10 ರಿಂದ 12ರ ವರೆಗೆ ಏರಿಸಬೇಕೆಂದು ಇದ್ದೆವು. ಈಗ ಕೇಂದ್ರ ಸರಕಾರ 10 ಪೈಸೆ ಒಂದು ಲೀಟರಿಗೆ ಹಾಕಿರುವಾಗ ಇದರ ಮೇಲೆ ರಾಜ್ಯ ಸರಕಾರ ಬೇರೆ ಟ್ಯಾಕ್ಸ್ ಕೊಡಬೇಕೆಂದು ಹಾಕಿದರೆ ಇದನ್ನು ಬಳಕೆದಾರರು ಹೇಗೆ ಕೊಡಲು ಸಾಧ್ಯ ಎನ್ನುವುದನ್ನು ಯೋಚಿಸಬೇಕಾಗುತ್ತೆ. ಇದೇ ರೀತಿ ಸಿಮೆಂಟು ಹಾಗೂ ಅರ್ಬನ್ ಪ್ರಾಪರ್ಟಿ ಟ್ಯಾಕ್ಸ್ ಮತ್ತು ಚಿಮಣಿ ಎಣ್ಣೆ ಕಾಫಿ ಮತ್ತು ಸಕ್ಕರೆ ಇವುಗಳ ಮೇಲೆ ಕೇಂದ್ರದವರು ಟ್ಯಾಕ್ಸ್ ಹಾಕಿದ್ದಾರೆ. ಇದನ್ನು ನೋಡಿದ ಮೇಲೆ ನಾವೂ ಇವುಗಳ ಮೇಲೆ ಟ್ಯಾಕ್ಸ್ ಹಾಕಬೇಕಾದರೆ ಇದು ಎಷ್ಟುಮಟ್ಟಿಗೆ ಸಾಧ್ಯ ಎನ್ನುವ ಒಂದು ಸಂದೇಹ ಬಂದಿದೆ. Central Government has made inroads, undue inroads into the legitimate domain of the State resources...... ...ಇದನ್ನು ಹೇಳದೆ ಗತ್ಯಂತರವೇ ಇಲ್ಲ. ಇದರ ವಿಚಾರದಲ್ಲಿ ಇಲ್ಲಿ ಜಗಳ ಮಾಡತಕ್ಕದ್ದಲ್ಲ. ಮುಂದೆ ನ್ಯಾಷನಲ್ ಡೆವಲಪ್‌ಮೆಂಟು ಕೌನ್ಸಿಲ್‌ನಲ್ಲಿ ಎಲ್ಲ ಸಂಸ್ಥಾನದ ಮುಖ್ಯ ಮಂತ್ರಿಗಳೂ ಬರುತ್ತಾರೆ. ಅಲ್ಲಿ ಇದರ ವಿಚಾರವನ್ನು ತೆಗೆದುಕೊಳ್ಳುತ್ತೇನೆ. ನಾಳೆ ನಮ್ಮ ನೀರಾವರಿ ಯೋಜನೆಗಳಿಗೆ ಹಣವನ್ನು ಎಲ್ಲಿಂದ ತರಬೇಕು ಎನ್ನುವ ಪ್ರಶ್ನೆ ಕೂಡ ಬರುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಇದರಲ್ಲಿ ಕಾನ್‌ಸ್ಟಿಟ್ಯೂಷನ್ ಇಂಪ್ರೊಪ್ರೈಟಿ ಏನಾದರೂ ಇದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಕಾನ್‌ಸ್ಟಿಟ್ಯೂಷನ್ ಕೆಲವು ವಿಚಾರಗಳಲ್ಲಿ ಸ್ಪಷ್ಟವಾಗಿದೆ. ಒಂದು ಷರತ್ತಿನ ಮೇಲೆ ಕೇಂದ್ರ ಸರಕಾರವೂ ಕರ ಹಾಕಲು ಮತ್ತು ರಾಜ್ಯ ಸರಕಾರ ಕರ ಹಾಕಲು ಹಕ್ಕಿದೆ. ಈಗ ರಾಜ್ಯ ಸರಕಾರದವರು ಕರ ಹಾಕಿದರೆ ಮತ್ತು ಕೇಂದ್ರ ಸರಕಾರವೂ ಕರ ಹಾಕಿದರೆ, ಇವನ್ನು ವಸೂಲು ಮಾಡುವುದೆಲ್ಲಾ ಪ್ರಾಂತದಲ್ಲಿರುವ ಸರಕಾರಗಳೇ. ಆದರೆ ಇದು ಜನರಿಗೆ ಗೊತ್ತಾಗುವುದಿಲ್ಲ. ಇದು ಇನ್‌ಡೈರೆಕ್ಟ್ ಟ್ಯಾಕ್ಸ್ ಎಂದು ಜನರ ಮೇಲೆ ಬರುತ್ತದೆ. ಪ್ರತಿ ವರ್ಷವೂ ರಾಜ್ಯ ಸರಕಾರ ಕೇಂದ್ರದಿಂದ ಇಂತಿಷ್ಟು ಪಾಲು ಎಂದು ಪಡೆಯುತ್ತದೆ. ಈಗ ಕೇಂದ್ರ ಸರಕಾರದ ಬಡ್ಜೆಟ್ಟನ್ನು ನೋಡಿದರೆ ರಾಜ್ಯ ಸರಕಾರಗಳ ಮೇಲೆ ಮುತ್ತಿಗೆ ಹಾಕಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಇದು ಮೈಸೂರು ರಾಜ್ಯ ಒಂದರಲ್ಲೇ ಅಲ್ಲ. ಎಲ್ಲ ರಾಜ್ಯ ಸರಕಾರಗಳ ಮೇಲೂ ಬರುತ್ತದೆ. ಇದು ಎಲ್ಲ ರಾಜ್ಯ ಸರಕಾರಗಳ ಜೀವಾಳ. ಇದಕ್ಕೆ ಸಂಬಂಧಪಟ್ಟ ವಿಚಾರಗಳ ಮೇಲೆ ನಾನು ಅಪ್ರೋಪ್ರಿಯೇಟ್ ಟೈಂನಲ್ಲಿ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೇನೆ. ಇನ್ನೊಂದು ವಿಚಾರ ಇಲ್ಲಿ ಇಡಬಯಸುತ್ತೇನೆ.

ಶ್ರೀ ಹೆಚ್. ಸಿದ್ಧವೀರಪ್ಪ.—ನೀವೂ ಕೂಡ ಕೇಂದ್ರದವರು ಮಾಡಿದಂತೆ ಇಲ್ಲೂ ರಿಪೀಟ್ ಮಾಡುತ್ತಿದ್ದೀರಿ. ಟ್ಯಾಕ್ಸ್‌ಗಳ ವಿಚಾರದಲ್ಲಿ ಲೋಕಲ್ ಬಾಡೀಸ್‌ಗಳ ಅಧಿಕಾರ ವ್ಯಾಪ್ತಿಗೆ ಇನ್‌ರೋಡ್ ಮಾಡುತ್ತಿದ್ದೀರಿ, ಅದೇ ರೀತಿ ಪಂಚಾಯಿತಿಗಳಲ್ಲೂ ಬಂದಿದೆ. ಟ್ಯಾಕ್ಸೇಷನ್ ಪ್ರಪೋಸಲ್‌ಗಳಲ್ಲಿ ಬರುವುದನ್ನೇ ಇಲ್ಲೂ ರಿಪೀಟ್ ಮಾಡಿದ್ದಾರೆ.

Sri M. S. KRISHNAN.—The Hon'ble Finance Minister said that the Central Government has made inroads, undue inroads into the legitimate domain of the State resources. Has there been any earlier understanding at the level of the Chief Ministers regarding the items in which the State alone is entitled to tax ?

Sri RAMAKRISHNA HEGDE.—There is no question of understanding. It is a very well known fact that the resources of the State Government are very very limited unlike the Central Government resources. Central Government resources expand year after year. When the Central Government brings in taxation proposals, it has to be considered to what extent it is going to affect adversely the financial resources of the State Government. That is what I wanted to say.

ಇದರ ಬಗ್ಗೆ ನಾನು ಕೇಂದ್ರದ ಮೇಲೆ ಆರೋಪಣೆ ಮಾಡುತ್ತೇನೆ ಎಂದು ತಿಳಿದುಕೊಳ್ಳಬಾರದು. ಇದರಲ್ಲಿ ನಮ್ಮ ವೈಟಲ್ ಇಂಟರೆಸ್ಟ್ ಯಾವ ರೀತಿ ಇದೇ ಎನ್ನುವುದನ್ನು ಹೇಳುತ್ತಿದ್ದೇನೆ. ರಾಜ್ಯ ಸರಕಾರ ಕೆಲವು ಭಾಗ ಹಣವನ್ನು ಲೋಕಲ್ ಅಥಾರಿಟೀಸ್‌ಗೆ ಕೊಡುವುದು ಕಷ್ಟ ಎಂದು ಆಯಾ ತಾಲ್ಲೂಕು ಬೋರ್ಡುಗಳು ಮತ್ತು ಪಂಚಾಯತಿಗಳು ಕರವನ್ನು ಹಾಕಿ ವಸೂಲು ಮಾಡುತ್ತವೆ, ಅವರಿಗೆ ಟ್ಯಾಕ್ಸ್ ಹಾಕಲು ಅಧಿಕಾರವನ್ನೂ ಕೊಟ್ಟಿದ್ದೇವೆ ಇದರಲ್ಲಿ ಸರಕಾರ ಕೈ ಹಾಕಬಾರದು ಎನ್ನುವುದನ್ನು ನಾನೂ ಒಪ್ಪುತ್ತೇನೆ. ಈಗ ಕೇಂದ್ರದವರ ಅರ್ಬನ್ ಪ್ರಾಪರ್ಟಿ ಟ್ಯಾಕ್ಸ್ ಎಂದು ಹಾಕುತ್ತಿದ್ದಾರೆ. ನಮ್ಮ ರಾಜ್ಯ ಸರಕಾರ ಪುನಃ ಇದರ ಮೇಲೆ ಟ್ಯಾಕ್ಸ್ ಹಾಕಬೇಕು ಎಂದರೆ ಆಗುವುದಿಲ್ಲ. ಕೇಂದ್ರ ಸರಕಾರದವರೂ ಅರ್ಬನ್ ಡೆವಲಪ್‌ಮೆಂಟಿಗಾಗಿ ಇದರ ಹಣವನ್ನು ಪಯೋಗಿಸುತ್ತಾರೆ. ಈಗಾಗಲೇ ಕೆಲವು ಕಡೆ ಪ್ರಾಪರ್ಟೀ ಟ್ಯಾಕ್ಸ್ ಇದೆ. ಕೆಲವು ಕಡೆ ಶೇಕಡಾ 25 ರಷ್ಟು ಇದೆ. ಕೆಲವು ಕಡೆ ಶೇಕಡಾ ಹತ್ತರಷ್ಟು ಇದೆ. This is a matter where we are vitally interested.

Sri S. SIVAPPA.—Does it not mean that both the Central and State Governments are not having financial discipline in their desperate mood towards taxation ?

Sri RAMAKRISHNA HEGDE.—So far as discipline is concerned, I am the first person to subscribe to it and I am the first person to explore to the extent possible and my capacities permit. ಕೇಂದ್ರ ಸರಕಾರ ಮಾಡಿದ್ದರೂ ಫೆಡರಲ್ ಸ್ಟ್ರಕ್ಚರು ನೀತಿಯಂತೆ ಒಂದು ಪದ್ಧತಿ ಇದೆ. ಇಂತಹ ಒಂದು ಸ್ಥಿತಿಯಲ್ಲಿ ಯಾವುದೇ ಒಂದು ನಿರ್ಣಯವನ್ನು ಕೇಂದ್ರ ಸರಕಾರ ತೆಗೆದುಕೊಳ್ಳುವಾಗ ಇತರ ದೇಶಗಳ ಹಿತದೃಷ್ಟಿಯನ್ನು ಇಟ್ಟುಕೊಂಡು ನಿರ್ಣಯವನ್ನು ತೆಗೆದುಕೊಳ್ಳಬೇಕು. ಆ ರೀತಿ ನಿರೀಕ್ಷಣೆ ಮಾಡುತ್ತೇನೆ. ಇಂದು ಇಡೀ ದೇಶ ಒಡೆದು ಕೆಲತಿಂಗಳುಗಳಾದರೂ ಇದನ್ನು ರಾಜಕೀಯದ ಮಟ್ಟದಿಂದ ಉದ್ಭವವಾಗಿದೆ ಎಂದು ಹೇಳುತ್ತಿಲ್ಲ ?

ಈ ಮಾತನ್ನು ಇದೇ ಸಭೆಯಲ್ಲಿ ಹಿಂದೆ ಕೂಡ ಹೇಳಿದ್ದೇನೆ. ಮತ್ತು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್ ಮುಂದೆ ಕೂಡ ಹೇಳಿದ್ದೇನೆ. ಯಾವುದೇ ಆರ್ಥಿಕಾಭಿವೃದ್ಧಿ ಯೋಜನೆಯನ್ನು ಅದು ಸ್ಟೀಲ್‌ಪ್ಲಾಂಟ್ ಆಗಿರಬಹುದು, ಸೆಂಟ್ರಲ್ ಪ್ರಾಜೆಕ್ಟ್ ಆಗಿರಬಹುದು, ವಾಚ್ ಫ್ಯಾಕ್ಟರಿಯಾಗಿರಬಹುದು, ಬಂದರುಗಳ ಅಭಿವೃದ್ಧಿ ಯೋಜನೆಯಾಗಿರಬಹುದು, ಹೊಸ ರೈಲ್ವೆ ಮಾರ್ಗವಾಗಿರಬಹುದು, ಕೈಕೊಳ್ಳುವಾಗ ಯಾವುದೇ ಒತ್ತಾಯಕ್ಕೆ ಮಣಿಯದೆ ನಿರಪೇಕ್ಷಣೀಯ ದೃಷ್ಟಿಯಿಂದ ಕೇಂದ್ರ ಸರ್ಕಾರದವರು ಆ ಯೋಜನೆಗಳನ್ನು ಪ್ರಾರಂಭ ಮಾಡುವುದು ಅಗತ್ಯ. ಇವತ್ತು ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯನ್ನು ಪ್ರಾರಂಭ ಮಾಡುವ ಬಗ್ಗೆ ಪ್ರಪಂಚದ ಯಾವುದೇ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ಬರಮಾಡಿಕೊಂಡು ಪರೀಕ್ಷೆ ಮಾಡಿಸಲಿ, ಪ್ರತಿಯೊಂದು

ದೃಷ್ಟಿಯಿಂದಲೂ ಕೂಡ ಹೊಸಪೇಟೆಗಿಂತ ಬೇರೆ ಜಾಗವಿಲ್ಲ ಎಂದು ಅವರು ಹೇಳುತ್ತಾರೆ. ಹಿಂದೆ ಶ್ರೀ ಸಂಜೀವರೆಡ್ಡಿಯವರು ಕೇಂದ್ರದಲ್ಲಿ ಮಂತ್ರಿಗಳಾಗಿದ್ದಾಗ ಉಕ್ಕಿನ ಕಾರ್ಖಾನೆಯನ್ನು ವಿಶಾಖ ಪಟ್ಟಣದಲ್ಲಿ ಸ್ಥಾಪಿಸಬೇಕೆಂದು ಹೇಳಲಾಗುತ್ತಿತ್ತು, ಶ್ರೀ ಸುಬ್ರಹ್ಮಣ್ಯಂ ಅವರು ಕೇಂದ್ರದಲ್ಲಿ ಮಂತ್ರಿಗಳಾಗಿದ್ದಾಗ ಉಕ್ಕಿನ ಕಾರ್ಖಾನೆಯನ್ನು ಸೇಲಂನಲ್ಲಿ ಪ್ರಾರಂಭ ಮಾಡಬೇಕೆಂದು ಹೇಳ ಲಾಗುತ್ತಿತ್ತು. ಅದರಂತೆ ಮೈಸೂರಿನಲ್ಲಿ ಉಕ್ಕಿನ ಕಾರ್ಖಾನೆ ಪ್ರಾರಂಭವಾಗಬೇಕಾದರೆ ಮೈಸೂರಿ ನವರೇ ಮಂತ್ರಿಗಳಾಗಬೇಕೇ ಎಂದು ಕೇಳುತ್ತೇನೆ. ಇದೇ ಪರಿಸ್ಥಿತಿ ಮುಂದುವರೆದರೆ ಈ ದೇಶ ಒಂದಾಗಿ ಉಳಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ಗೋವಾ ಬಂದರಿನ ಅಭಿವೃದ್ಧಿಗಾಗಿ ಕೇಂದ್ರಸರ್ಕಾರದವರು 28 ಕೋಟಿ ರೂಪಾಯಿಗಳ ಯೋಜನೆಯನ್ನು ಮಂಜೂರು ಮಾಡಿದ್ದಾರೆ. ಅದಿರು ಇರುವುದು ನಮ್ಮ ರಾಜ್ಯದಲ್ಲಾದರೆ ಬಂದರುಗಳ ಅಭಿವೃದ್ಧಿಯಾಗುತ್ತಿರುವುದು ಮದ್ರಾಸ್ ಮತ್ತು ಗೋವಾ ರಾಜ್ಯಗಳಲ್ಲಿ. ಮತ್ತೊಂದು ಉದಾಹರಣೆಯನ್ನು ಕೊಡುವುದಾದರೆ ಬೆಂಗಳೂರಿನಲ್ಲಿ ಕಳೆದ ಆರು ವರ್ಷಗಳಿಂದ ಒಮೆಗಾ ವಾಚ್ ಕಾರ್ಖಾನೆಯನ್ನು ಪ್ರಾರಂಭ ಮಾಡ ಬೇಕೆಂಬ ಪ್ರಯತ್ನ ನಡೆಯುತ್ತಿದ್ದರೆ, ಇವತ್ತು ಕೇಂದ್ರ ಸರ್ಕಾರದವರು ಈ ವಾಚ್ ಫ್ಯಾಕ್ಟರಿ ಯನ್ನು ಜಮ್ಮು ಅಂಡ್ ಕಾಶ್ಮೀರದಲ್ಲಿ ಸ್ಥಾಪನೆ ಮಾಡಬೇಕೆಂದು ಹೇಳುತ್ತಿದ್ದಾರೆ. ಅಲ್ಲಿಯ ಜನರಿಗೆ ಸಂತೋಷಪಡಿಸಲು ಈ ತೀರ್ಮಾನ ಕೈಕೊಳ್ಳುತ್ತಿರಬಹುದೆಂದು ಕಾಣುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಹಿಂದುಳಿದ ಪ್ರದೇಶಗಳಲ್ಲಿ ಅಂತಹ ಫ್ಯಾಕ್ಟರಿಗಳನ್ನು ಸ್ಥಾಪನೆ ಮಾಡುವುದರಲ್ಲಿ ತಪ್ಪೇನು ?

ಶ್ರೀ ವೀರೇಂದ್ರ ಪಾಟೀಲ್.—ಇನ್‌ಫ್ರಾಸ್ಟ್ರಕ್ಚರ್ ಇಲ್ಲದೆ ಹೇಗೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದು?

ಶ್ರೀ ರಾಮಕೃಷ್ಣ ಹೆಗಡೆ.—ಅಲ್ಲಿ ಬೇಕಾದರೆ ಬೇರೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡಲಿ. ಅಲ್ಲಿ ಹೊಸದಾಗಿ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕಾದರೆ ಖರ್ಚು ಎಷ್ಟಾಗುತ್ತದೆ, ಕಾಸ್ಟ್ ಆಫ್ ಪ್ರೊಡಕ್ಷನ್ ಎಷ್ಟಾಗುತ್ತದೆ ಎಂಬುದನ್ನು ಸಹ ನೋಡುವುದು ಒಳ್ಳೆಯದು. ಆದ್ದ ರಿಂದ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಇಂತಹ ಯಾವುದೇ ಒಂದು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮದ ಪ್ರಶ್ನೆ ಬಂದಾಗ ಕೇಂದ್ರ ಸರ್ಕಾರದವರು ನಿರಪೇಕ್ಷಣೀಯ ಬುದ್ಧಿಯಿಂದ ಮತ್ತು ಅರ್ಥಿಕ ದೃಷ್ಟಿಯಿಂದ ನಿರ್ಣಯ ಕೈಕೊಳ್ಳಬೇಕು.

ಶ್ರೀ ಆರ್. ದಯಾನಂದಸಾಗರ್.—ನಿಮ್ಮ ಸರ್ಕಾರಕ್ಕೆ ಪುಲ್ಲಿಂಗ್ ಪವರ್ ಇಲ್ಲದಿರುವುದರಿಂದ ಈ ರೀತಿಯಾಗುತ್ತಿದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಈ ಸರ್ಕಾರದವರು ಸಹ ಇಂಡಿಕೇಟ್ ಸೇರಿಬಿಟ್ಟರೆ ಎಲ್ಲವೂ ಸುಗಮ ವಾಗಿ ನಡೆಯುತ್ತದೆಂದು ಕಾಣುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಕೇಂದ್ರ ಸರ್ಕಾರದೊಡನೆ ರಾಜಕೀಯವಾಗಿಯೂ ಕೂಡ ನಾವು ಹೊಂದಿಕೊಂಡು ಹೋಗಬೇಕೆಂಬುದು ಇದರ ಅರ್ಥ ಎಂದು ಕಾಣುತ್ತದೆ. ಕೇಂದ್ರ ಸರ್ಕಾರದವರ ಕೃಪಾಕಟಾಕ್ಷಕ್ಕೆ ಒಳಗಾಗಬೇಕೆಂದು ಹೇಳುತ್ತಿದ್ದಾರೆ. ಒಂದು ಕೆಲಸ ಮಾಡೋಣ, ನಮ್ಮ ಸ್ಥಾನ ಮಾನವನ್ನು ಅದಲುಬದಲು ಮಾಡಿಕೊಳ್ಳೋಣ, ಆಗಲೂ ಕೂಡ ತಾವು ಇದೇ ಮಾತನ್ನು ಹೇಳುತ್ತೀರಾ ?

ಶ್ರೀ ಆರ್. ದಯಾನಂದಸಾಗರ್.—ಇಂಡಿಕೇಟ್ ಮತ್ತು ಸಿಂಡಿಕೇಟ್ ಆಗಿರುವುದು ಇತ್ತೀಚೆಗೆ. ಕೇಂದ್ರದವರು ಸಹಾಯ ಮಾಡುತ್ತಿಲ್ಲವೆಂದು ಹೇಳುತ್ತಿದ್ದಾರೆ. ಕಾಂಗ್ರೆಸ್ ಒಡೆಯುವುದಕ್ಕೆ ಮೊದಲು ತಮ್ಮ ಪ್ರಭಾವವನ್ನು ಉಪಯೋಗ ಮಾಡಿ ಬೇಕಾದಂತಹ ಕೆಲಸಗಳನ್ನು ಏತಕ್ಕೆ ಮಾಡಿಸಿಕೊಳ್ಳಲಿಲ್ಲ ಎಂದು ನಾನು ಕೇಳುತ್ತಿರುವುದು. ಆಗಲೂ ಕೂಡ ಪುಲ್ಲಿಂಗ್ ಪವರ್ ಇರ ಲಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ದಯಾನಂದಸಾಗರ್ ಅವರು ಮಂತ್ರಿಗಳಾಗಿದ್ದಾಗಲೂ ಕೂಡ ಕಂಪ್ಲೇಂಟ್ ಮಾಡಿದ್ದಾರೆ.

ಶ್ರೀ ಆರ್. ದಯಾನಂದಸಾಗರ್.—ನಾನು ಉಪಮಂತ್ರಿಯಾಗಿದ್ದಾಗ 12 ಕೋಟಿ ರೂಪಾಯಿಗಳ ಒಂದು ಸಿಲ್ಕ್ ಇಂಡಸ್ಟ್ರೀ ಸ್ಕೀಮನ್ನು ಜಾರಿಗೆ ತರುವುದಕ್ಕೆ ಹಣ ಕೊಡಿ ಎಂದು ಇವರನ್ನೇ ಕೇಳಿದಾಗ ಹಣ ಇಲ್ಲ ಎಂದು ಹೇಳಿದರು. ಇವರೇ ಇಲ್ಲ ಎಂದು ಹೇಳುವಾಗ ಕೇಂದ್ರಸರ್ಕಾರದವರು ಎಲ್ಲಿ ಕೊಡುತ್ತಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಇನ್ನು ಐದನೇ ಆರ್ಥಿಕ ಆಯೋಗದವರು ತಮ್ಮ ಒಂದು ತೀರ್ಪನ್ನು ಏನು ಕೊಟ್ಟಿದ್ದಾರೆ ಅದರ ಬಗ್ಗೆ ನಾನು ಹೇಳುವುದಕ್ಕೆ ಬಯಸುವುದಿಲ್ಲ. ನಾವು ಆರ್ಥಿಕ ಆಯೋಗದ ಮುಂದೆ ಯಾವ ತರಹ ಮೆಮೊರ್ಯಾಂಡಮ್‌ನ್ನು ಇಟ್ಟಿದ್ದೆವು ಅದರ ಸಾರಸಂಗ್ರಹವನ್ನು ತಗೆದು ಮಾನ್ಯ ಸದಸ್ಯರಿಗೆ ಈಗಾಗಲೇ ಹಂಚಿದ್ದೇವೆ. ಅದು ಸರಿಯಾಗಿದೆಯೋ ಇಲ್ಲವೋ ಎಂದು ವಿಮರ್ಶೆ ಮಾಡುವುದು ಮಾನ್ಯ ಸದಸ್ಯರಿಗೆ ಸೇರಿದೆ. ಈಗ ಈ ಸಭೆಯ ಮುಂದೆ ಆ ಮೆಮೊರ್ಯಾಂಡಮ್‌ಗೆ ಸಂಬಂಧಪಟ್ಟಂತೆ ಇರುವ ಒಂದು ಪ್ಯಾರವನ್ನು ಮಾತ್ರ ಓದುತ್ತೇನೆ :

"We are unable to understand the rationale behind the Award. In this connection, I would like to make a reference to the position revealed for some other States. There are seven States, Bihar, Gujarat, Hariyana, Maharashtra, Madhya Pradesh, Punjab and Uttar Pradesh, in respect of which substantial devolutions of Taxes have been recommended by the Commission. These seven States, according to all the available information, were in a position to show substantial revenue surpluses even without the benefit of the upward revisions made by the Fifth Finance Commission over the Fourth Finance Commission's figures. This only means that there are States which have received guaranteed devolution of Taxes regardless of the fact whether they were deficit or surplus, and that in respect of all the other States except Mysore, where deficit was clearly demonstrated the Commission has come in with substantial grant-in aid to meet these dificits. As things stand we would neither be in the category of States which will record substantial surplus through the five-year period, nor will we receive sufficient assistance from the Government of India to correct the deficits."

ಶ್ರೀ ಎಚ್. ಸಿದ್ಧವೀರಪ್ಪ.—ಪಾನನಿರೋಧವನ್ನು ಸಡಿಲಗೊಳಿಸಿದ್ದರಿಂದ ಐದು ವರ್ಷಕ್ಕೆ ಸುಮಾರು 80-90 ಕೋಟಿ ರೂಪಾಯಿಗಳ ಆದಾಯ ಬರುತ್ತದೆಂದು ಆಯೋಗದ ಮುಂದೆ ತೋರಿಸಿದ್ದರಿಂದ ಮತ್ತು ಪರ್-ಕ್ಯಾಪಿಟಾ ಇನ್‌ಕಂ ಒಂದು ರೂಪಾಯಿನಷ್ಟು ಜಾಸ್ತಿಯಾಗಿದೆ ಎಂದು ಹೇಳಿದ್ದರಿಂದ ಈ ತೊಂದರೆ ಬಂತು. ಇಲ್ಲದಿದ್ದರೆ ನಮಗೆ ಅನುಕೂಲವಾಗುತ್ತಿತ್ತು. ಇದೇ ವಿಚಾರವನ್ನು ಮತ್ತೆ ಮತ್ತೆ ಪ್ರಸ್ತಾಪ ಮಾಡುವುದು ಸರಿಯಾಗಿ ಕಾಣುವುದಿಲ್ಲ. ನಿಮ್ಮ ಕೇಸನ್ನು ಕೇಂದ್ರಸರ್ಕಾರದವರು ಮತ್ತು ಪ್ಲಾನಿಂಗ್ ಕಮೀಷನ್‌ನವರು ಅರ್ಥ ಮಾಡಿಕೊಂಡಿದ್ದಾರೆ ಮತ್ತು ಏನಾದರು ಡಿಫಿಸಿಟ್ ಆದರೆ ಅದನ್ನು ತುಂಬಿಕೊಡುವುದಕ್ಕೆ ನಮ್ಮ ಸಹಾನುಭೂತಿ ಇದೆ ಎಂದು ಕೂಡ ಅವರು ಹೇಳಿರುವುದರಿಂದ ಇದೇ ವಿಚಾರವನ್ನು ಮತ್ತೆ ಮುಂದ ವರೆಸುವುದು ಸರಿಯಲ್ಲವೆಂದು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಪಾನನಿರೋಧವನ್ನು ಸಡಿಲಗೊಳಿಸಿದ್ದು 5ನೇ ಆರ್ಥಿಕ ಆಯೋಗ ನೇಮಕವಾಗುವುದಕ್ಕೆ ಮೊದಲು, ಅಂದರೆ ನಾಲ್ಕನೆಯ ಆರ್ಥಿಕ ಆಯೋಗದವರು ತಮ್ಮ ತೀರ್ಪು ಕೊಟ್ಟಮೇಲೆ. ನಾಲ್ಕನೆಯ ಆರ್ಥಿಕ ಆಯೋಗದವರು ತಮ್ಮ ತೀರ್ಪು ಕೊಟ್ಟಮೇಲೆ ನಾಲ್ಕನೆಯ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುತ್ತದೆಂದು ಇಡೀ ದೇಶ ನಂಬಿತ್ತು. ಅದರಂತೆ ನಾವು ಕೂಡ ನಂಬಿದ್ದೆವು. ಈ ಮಧ್ಯದಲ್ಲಿ ಇಂಡಿಯಾ ಮತ್ತು ಪಾಕೀಸ್ತಾನಕ್ಕೆ ಯುದ್ಧವಾದರಿಂದ ಪಂಚವಾರ್ಷಿಕ ಯೋಜನೆಯನ್ನು ಮುಂದಕ್ಕೆ ಹಾಕಲಾಯಿತು. ಎರಡು ವರ್ಷಗಳು ಕಳೆದನಂತರ ಕೆಲವು ರಾಜ್ಯಸರ್ಕಾರಗಳು ಹೊಸ ಆರ್ಥಿಕ ಆಯೋಗವನ್ನು ನೇಮಕ ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಆಗ್ರಹಪಡಿಸಿದವು. ಅದರಂತೆ ಕೇಂದ್ರ ಸರ್ಕಾರದವರು 5ನೇ ಆರ್ಥಿಕ ಆಯೋಗವನ್ನು ನೇಮಕ ಮಾಡಿದರು. 5ನೇ ಆರ್ಥಿಕ ಆಯೋಗದವರ ಕಣ್ಣು ಕಟ್ಟುವುದಕ್ಕೆ ನಾವು ಮತ್ತೆ ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ.

ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಸ್ವಲ್ಪ ಸತ್ಯಾಂಶ ಇದೆ. ಆರ್ಥಿಕ ಆಯೋಗದಿಂದ ಯಾವ ಒಂದು ನಷ್ಟ ನಮಗೆ ಆಯಿತೋ ಅದನ್ನು ಇವತ್ತು ತುಸುಮಟ್ಟಿಗೆ ಹೆಚ್ಚು ಕಮ್ಮಿ ತುಂಬಿ ಕೊಡತಕ್ಕ ಯೋಜನೆಯನ್ನು ಪ್ಲಾನಿಂಗ್ ಕಮಿಷನ್‌ರವರು ಮತ್ತು ಕೇಂದ್ರ ಸರ್ಕಾರದವರು ಮಾಡಿದ್ದಾರೆ ಎಂದು ಈಗ ಹೇಳುತ್ತೇನೆ. ಮೊದಲನೆಯದು ಆರ್ಥಿಕ ಆಯೋಗದವರು ಏನು ಹೇಳಿದರು :—

"A purposive scheme of federal finance should be designed to serve the following broad purposes:

1. It should firstly augment the State's own limited resources so as to help them meet their expanding need for expenditure as far as can be done from surpluses of the Union. The pre-emptive character of the financial needs of the Union constitutes a limiting factor in formulating a scheme of transfer to States. Yet the States should have fairly adequate funds including their own revenues and transfers from the Union to maintain and improve their resources to a reasonable extent;
2. Secondly it is desirable to see that the transfer of funds is so designed as to assist adequately the States with comparatively less capacity to raise the resources. (I lay emphasis on the words 'less capacity').

My question is whether the recommendation of this Commission is in conformity with these two purposes. I say 'No'.

ಇದರ ಸಾರಾಂಶ ಏನೆಂದರೆ ಇದರಲ್ಲಿ ಕೆಲವೊಂದು ತತ್ವ ಏನು ಹೇಳಿದರೋ ಅದಕ್ಕನುಸಾರವಾಗಿ ಮಾಡಬೇಕು, ಮುಂದಿನ ಚರ್ಚೆ ಇಲ್ಲ, ಮತ್ತು ಯಾವ ರಾಜ್ಯಗಳಿಗೆ ರೆವಿನ್ಯೂ ಸರ್‌ಪ್ಲಸ್ ಇತ್ತೋ ಅದೇ ರಾಜ್ಯಗಳಿಗೆ ಅವರ ಒಂದು ಫಾರ್ಮುಲಾದಿಂದ ಹೆಚ್ಚು ಹೆಚ್ಚು ಗ್ರಾಂಟ್ ಇನ್ ಏಡ್ ಕೂಡ ಸಿಕ್ಕಿತು. ಇದರಿಂದ ಈ ವಿಷಮತೆ ಉಂಟಾಗಿದೆ ಎಂದು ಹೇಳಲು ಬಯಸುತ್ತೇನೆ.

ಇನ್ನೊಂದು ದೃಷ್ಟಿಯಿಂದ ನೋಡಿದರೆ ಈಗಾಗಲೇ ಎರಡು ವರ್ಷದ ಹಿಂದೆ ಮಾಡಿದಂತಹ ಸೂಚನೆಯನ್ನು ಪುನಃ ವಿಚಾರ ಮಾಡಬೇಕಾಗುತ್ತದೆ. ಅದೇನೆಂದರೆ ಒಂದು ಶಾಶ್ವತವಾದಂತಹ ಫೈನಾನ್ಸ್ ಕಮಿಷನನ್ನು ಕೇಂದ್ರ ಸರ್ಕಾರದವರು ನೇಮಿಸಬೇಕು ಇಲ್ಲದೇ ಇದ್ದರೆ 5 ವರ್ಷಕ್ಕೊಮ್ಮೆ ಈ ಕಮಿಷನ್ ನೇಮಕ ಮಾಡಿದರೆ ಇದರಲ್ಲಿ ಯಾರು ಬರುತ್ತಾರೋ ಯಾರು ಹೋಗುತ್ತಾರೋ ಗೊತ್ತಾಗುವುದಿಲ್ಲ, ಮತ್ತು ಪ್ರತಿಯೊಂದು ಕಮಿಷನ್‌ದವರೂ ತಮಗೆ ಬೇಕಾದಂತಹ ಅಥವಾ ಸರಿಕಂಡಂಥ ತತ್ವಗಳನ್ನು ಸ್ವೀಕಾರ ಮಾಡುತ್ತಾರೆ, 4 ಆರ್ಥಿಕ ಆಯೋಗದವರು ಯಾವ ಒಂದು ತತ್ವವನ್ನು ಅನುಸರಿಸಿದರೋ ಆ ತತ್ವಗಳಿಗೂ ಇವರು ಅನುಸರಿಸಿದ ತತ್ವಕ್ಕೂ ಯಾವ ತರಹದ ತಾರತಮ್ಯವೂ ಇಲ್ಲ ಆದ್ದರಿಂದ ಕೇಂದ್ರ ಸರ್ಕಾರದವರು ಒಂದು ಶಾಶ್ವತವಾದಂತಹ ಫೈನಾನ್ಸ್ ಕಮಿಷನ್‌ನ್ನು ಮಾಡಬೇಕು ಮತ್ತು ಕಮಿಷನ್‌ರವರು ಪ್ರತಿ ವರ್ಷ ಯಾವ ರಾಜ್ಯಸರ್ಕಾರ ಸಿಕ್ಕಾಪಟ್ಟೆ ದುಂದುಗಾರಿಕೆಯಿಂದ ಖರ್ಚು ಮಾಡುತ್ತದೆಯೋ ಅದಕ್ಕೆ ಎಚ್ಚರಿಕೆ ಕೊಟ್ಟು, ಯಾವ ಸರ್ಕಾರ ರಿಸೋರ್ಸಸ್ ಮೊಬಲೈಸ್ ಮಾಡುತ್ತದೆಯೋ ಅದನ್ನು ಮೆಚ್ಚಿ ಯಾವ ಸರ್ಕಾರದಲ್ಲಿ ಕರಭಾರ ಎಷ್ಟುಮಟ್ಟಿಗೆ ಇದೆ, ಇದೆಲ್ಲವನ್ನೂ ಗಣನೆಗೆ ತೆಗೆದುಕೊಂಡು ಪ್ರತಿವರ್ಷ ತಮ್ಮ ರೆಕಮಂಡೇಷನ್‌ನ್ನು ಕೊಡಬೇಕು ಮತ್ತು ಕೇಂದ್ರ ಸರ್ಕಾರದ ಪ್ಲಾನಿಂಗ್ ಕಮಿಷನ್ನಿನವರು ಅವರ ಶಿಫಾರಸಿನ ಮೇರೆಗೆ ಒಂದು ಆರ್ಥಿಕ ಯೋಜನೆಯನ್ನು ಮಾಡಬೇಕೆಂದು ಹೇಳಿ ಇಲ್ಲಿ ನಾನು ಕೇಳಿಕೊಳ್ಳುತ್ತೇನೆ.

Sri H. SIDDAVEERAPPA.—That needs a constitutional amendment.

Sri RAMAKRISHNA HEGDE.—Even if it is necessary to amend the Constitution I think it is worthwhile to do so.

ಶ್ರೀ ಡಿ. ದೇವರಾಜ ಅರಸ್.—ಒಂದೊಂದು ಆಯೋಗದವರು ಒಂದೊಂದು ರೀತಿ, ತತ್ವವನ್ನು ಅನುಸರಿಸುತ್ತಾರೆ ಎಂದು ಹೇಳಿದಿರಿ, ಇರಬಹುದು. 5ನೇ ಆರ್ಥಿಕ ಆಯೋಗದವರು ಯಾವ ತತ್ವವನ್ನು ಅನುಸರಿಸಿದರೋ ಅದನ್ನು ಪೂರ್ವಭಾವಿಯಾಗಿ ಸಂಬಂಧಪಟ್ಟ ರಾಜ್ಯಗಳ ಚೀಫ್ ಮಿನಿಸ್ಟರ್‌ರವರ ಜೊತೆಯಲ್ಲಿ ಚರ್ಚೆ ಮಾಡಿ ಒಪ್ಪಿರಲಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಇವು ಚೀಫ್ ಮಿನಿಸ್ಟರುಗಳ ಹತ್ತಿರ ಒಪ್ಪಿಗೆ ಮಾಡಿಕೊಂಡಂಥ ತತ್ವಗಳು ಅಲ್ಲ. ನಾವು ಚರ್ಚೆ ಮಾಡಿದಾಗ ಮತ್ತು ಬೇರೆ ರಾಜ್ಯದವರು ಚರ್ಚೆ ಮಾಡಿದಾಗ ಅವರೂ ಸಹ ಅನೇಕ ರೀತಿಯ ಸೂಚನೆಗಳ ಬಗ್ಗೆ ಚರ್ಚೆ ಮಾಡಿದರು. ಕೆಲವೊಂದು ಪ್ರದೇಶಗಳು ಬಹಳ ಬ್ಯಾಕ್‌ವರ್ಡ್ ಇವೆ, ಅಲ್ಲಿನವರಿಗೆ ಆರ್ಥಿಕವಾಗಿ ರಿಸೋರ್ಸಸ್ ಮೊಬಿಲೈಸ್ ಮಾಡತಕ್ಕ ಶಕ್ತಿ ಇಲ್ಲ, ಅದಕ್ಕೆ ಕೆಲವು ಭಾಗವನ್ನು ಬ್ಯಾಕ್‌ವರ್ಡ್‌ನೆಸ್‌ನ ಆಧಾರದಮೇಲೆ ಹಂಚಬೇಕೆಂಬ ಸೂಚನೆ ಬಂದಿದೆ, ನಿಮ್ಮ ಅಭಿಪ್ರಾಯವೇನು ಅಂತ ಅಂದರು. ಇದನ್ನು ಎಂದೆಂದೂ ಮಾಡ ಕೂಡದು ಅಂತ ಅಂದಿದ್ದೇವೆ. ಇದನ್ನು ಮಾಡಿ ದೊಡ್ಡ ಅನ್ಯಾಯ ಮಾಡಿದ್ದಾರೆ. ಯಾವುದಾದರೂ ಒಂದು ಸ್ಟೇಟ್ ಬ್ಯಾಕ್‌ವರ್ಡ್ ಅಥವಾ ಫಾರ್ವರ್ಡ್ ಅಂತ ಅನ್ನುವುದನ್ನು ನಿರ್ಣಯ ಮಾಡುವುದು ಫೈನಾನ್ಸ್ ಕಮಿಷನ್‌ನ ಕೆಲಸವಲ್ಲ, ಇದರಲ್ಲಿ ಕೈಹಾಕಕೂಡದು ಎಂದು ಹೇಳಿದ್ದೇವೆ. ಇದನ್ನು ನಮ್ಮ ಒಪ್ಪಿಗೆ ತೆಗೆದುಕೊಂಡು ಮಾಡಿಲ್ಲ.

ಮಾನ್ಯ ಅಧ್ಯಕ್ಷರೇ, ಇನ್ನು ನಮ್ಮ ಲಕ್ಷ್ಯ 4ನೇ ಪಂಚವಾರ್ಷಿಕ ಯೋಜನೆಯ ಬಗ್ಗೆ ಹೋಗುತ್ತದೆ. ಶ್ರೀಮಾನ್ ಘೋರ್ಪಡೆಯವರು ಯುವಕರು, ಬಹಳ ಪಾಂಡಿತ್ಯದಿಂದ ಕೂಡಿದಂತಹ ಭಾಷಣ ಮಾಡುತ್ತಾರೆ, ಅವರು ಬಹಳ ಓದುತ್ತಾರೆ, ಅವರ ಬಗ್ಗೆ ಒಂದೇ ಒಂದು ದೂರು ಇದೆ, ಅದೇನೆಂದರೆ ಅವರು ಯಾವಾಗಲೂ ಫೈನಾನ್ಸ್ ವಿಚಾರ ಬಂದಾಗ ಸ್ವಲ್ಪ ನಿರಾಶಾದಾಯಕ ದೃಷ್ಟಿಯಿಂದ ನೋಡುತ್ತಾರೆ. ನನಗೂ ಅವರಿಗೂ ಅನೇಕ ಸಾರಿ ಚರ್ಚೆಯಾಗಿದೆ. ಪ್ಲಾನಿಂಗ್ ಬೋರ್ಡಿನಲ್ಲಿ ಚರ್ಚೆ ಮಾಡಿದ್ದೇವೆ. ರಿಸೋರ್ಸಸ್ ಕಮಿಟಿಯಲ್ಲಿ ಚರ್ಚೆ ಮಾಡಿದ್ದೇವೆ. ಅವರ ವಿಶಾಲ ಆಲೋಚನೆಯ ಪ್ರಕಾರ ನಮ್ಮ 4ನೇ ಪಂಚವಾರ್ಷಿಕ ಯೋಜನೆಯನ್ನು ಜಾರಿಗೆ ತರಲಿಕ್ಕೆ ನಮ್ಮ ಹತ್ತಿರ ದುಡ್ಡು ಇರುವುದಕ್ಕೆ ಸಾಧ್ಯವಿಲ್ಲ, ಓವರ್ ಡ್ರಾಫ್ಟ್ ಆಗುತ್ತದೆ ಏನು ಮಾಡುತ್ತೀರಿ ಅಂತ ಅನ್ನುವುದು ಇದೆ. ನಾನು ಅಷ್ಟು ನಿರಾಶಾದಾಯಕ ವ್ಯಕ್ತಿಯಲ್ಲ. ಏನಾದರೂ ಸಾಹಸ ಮಾಡಬೇಕು, ಇದನ್ನು ಸಾಧಿಸಿಯೇ ತೀರಬೇಕು ಎಂಬ ಹಟ ನಮ್ಮಲ್ಲಿ ಇರಬೇಕು. ನಮ್ಮಲ್ಲಿರತಕ್ಕ ಹಣದಿಂದ ನಾಲ್ಕನೇ ಪಂಚವಾರ್ಷಿಕ ಯೋಜನೆಯನ್ನು ಏನು ಹಾಕಿಕೊಂಡಿದ್ದೇವೆ ಅದನ್ನು ನಿಜವಾಗಿಯೂ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ಒಂದೇ ಒಂದು ಭಾವನೆಯಿಂದ; ನಿರಾಶಾದಾಯಕ ಭಾವನೆಯಿಂದ ಸುಮ್ಮನೆ ಕುಳಿತುಕೊಂಡರೆ ಮುಂದೆ ಯಾವ ಒಂದು ಕೆಲಸಗಳೂ ಆಗುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಬಯಸುತ್ತೇನೆ. ಅವರು ಹೇಳುವ ಮಾತಿನಲ್ಲಿ ಬಹಳಮಟ್ಟಿಗೆ ಸತ್ಯ ಇರುವುದಾದರೂ ನಾನು ಮಾತ್ರ ನಮ್ಮ ಮೈಸೂರು ರಾಜ್ಯದ ಚಿತ್ರವನ್ನು ಅಷ್ಟೊಂದು ನಿರಾಶಾದಾಯಕವಾದ ಬಣ್ಣದಲ್ಲಿ ಚಿತ್ರಿಸಲು ಒಪ್ಪುವುದಿಲ್ಲ. ಕಳೆದ 3 ವರ್ಷದ ಉದಾಹರಣೆಯನ್ನು ತೆಗೆದುಕೊಂಡರೆ ಪ್ಲಾನ್‌ನಲ್ಲಿ ಎಷ್ಟು ಪ್ರೊವೈಡ್ ಮಾಡಿದ್ದೇವೆಯೋ ಅದಕ್ಕಿಂತ ಹೆಚ್ಚು ಖರ್ಚು ಮಾಡಿದ್ದೇವೆ. ಈ ವರ್ಷ 60 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಪ್ಲಾನ್ ಸಾಧ್ಯವಿಲ್ಲ ಎಂದು ಯೋಜನಾ ಆಯೋಗದವರು ಹೇಳಿದರೂ 69 ಕೋಟಿ ರೂಪಾಯಿಗಳನ್ನು ನಾವು ಬಡ್ಜೆಟ್ಟಿನಲ್ಲಿ ತೋರಿಸಿದ್ದೇವೆ. ಯಾವುದಾದರೂ ರೀತಿಯಲ್ಲಿ ಕೆಲವು ಸಂದರ್ಭದಲ್ಲಿ ನಾವು ನಮ್ಮ ಖರ್ಚನ್ನು ಮಿತವ್ಯಯಗೊಳಿಸಿ......

Sri M. Y. GHORPADE.—Would the Hon. Minister tell me which are the figures I mentioned about the IV plan resources which are not the figures already accepted and declared by the Government and the Minister himself ? He said that I had given a pessimistic picture about the resources for the IV plan. Are they not the figures which have been adopted by the Government themselves ?

Sri RAMAKRISHNA HEGDE.—All the figures that he has quoted are the figures from our own document, but in spite of that I have confidence that we will be able to overcome these difficulties. If he asks me the question 'How', I will not be able to answer him right here,

but I have the confidence it is not an empty confidence, it is confidence based on our performance during the last three years, when we had tremendous financial difficulties.

Sri H. SIDDAVEERAPPA.—Government is supposed to base its case on facts and figures and not on imagination.

ಶ್ರೀ ರಾಮಕೃಷ್ಣ ಹೆಗಡೆ.—ಕಲ್ಪನಾ ಸಾಮ್ರಾಜ್ಯದಲ್ಲಿ ಯಾರೂ ಇಲ್ಲ, ನಾನು ಕಳೆದ 3 ವರ್ಷದಲ್ಲಿ ಏಕೆ ಕಳೆದ 5 ವರ್ಷದಲ್ಲಿ ಏನು ಸಾಧಿಸಿದ್ದೇವೆ ಅದರ ಮೇಲೆ ಹೇಳುತ್ತಾ ಇದ್ದೇನೆ. ಓವರ್‌ಡ್ರಾಫ್ಟ್ ಸ್ವಲ್ಪ ಹೆಚ್ಚಾಗಬಹುದು. ಹೆಚ್ಚಾದ ತಕ್ಷಣ ಮಾಡಿದ ಕೆಲಸ ನಿಂತುಹೋಗುತ್ತದೆ ಅಂತ ಅನ್ನುವುದು ಏನೂ ಇಲ್ಲ. ಈ ದೇಶದಲ್ಲಿ ಎಲ್ಲಾ ಸ್ಟೇಟ್‌ಗಳಿಗಿಂತ ಅತ್ಯಂತ ಕಡಿಮೆ ಓವರ್ ಡ್ರಾಫ್ಟ್ ಇರುವುದು ನಮ್ಮ ಮೈಸೂರಿನಲ್ಲಿ, ಸನ್ಯಕ್ಕೆ 9 ಕೋಟಿ ರೂಪಾಯಿ. ರಾಜಾಸ್ಥಾನ ಮತ್ತು ಇತರ ಕೆಲವು ರಾಜ್ಯಗಳಿಗೆ 35 ಕೋಟಿ ರೂಪಾಯಿಗಳವರೆಗೆ ಇದೆ.

7-30 P.M.

ಶ್ರೀ ಎಂ. ಎಸ್. ಕೃಷ್ಣನ್.—ಅಂಕಿಅಂಶ ಕೊಟ್ಟಿರುವುದರಲ್ಲಿ ಅನುಮಾನ ಬರುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ನಾಲ್ಕೈದು ವರ್ಷಗಳಿಂದ ನಾನ್-ಪ್ಲಾನ್ ಎಕ್ಸ್‌ಪೆಂಡಿಚರ್, ಅಡ್ಮಿನಿಸ್ಟ್ರೇಟಿವ್ ಎಕ್ಸ್‌ಪೆಂಡಿಚರ್ ಕಡಮೆ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕೆ ಒಂದು ಕಾರಣ ಫೈನಾನ್ಸ್ ಕಮಿಷನ್ನಿನಿಂದ ಕಡಮೆ ಸಹಾಯ ದೊರೆತಿರುವುದು. ಆಸ್ಪತ್ರೆ ಮೈಂಟೆನೆನ್ಸ್, ರಸ್ತೆ ದುರಸ್ತಿ, ಶಾಲೆ ದುರಸ್ತಿ ಮುಂತಾದುವುಗಳಿಗೆ ಸಾಕಾದಷ್ಟು ಹಣ ಕೊಟ್ಟಿರಲಿಲ್ಲ, ಅದಕ್ಕೆ ಕೊಡುವುದನ್ನು ಪ್ಲಾನಿಗೆ ಒದಗಿಸಬೇಕೆಂದು ಹಾಗೆ ಮಾಡಲಾಯಿತು. ಫೈನಾನ್ಸ್ ಕಮಿಷನ್ ಬಂದಾಗ ಖರ್ಚು ನೋಡಿ ಅದು ಸಹಾಯ ನೀಡುವುದು. ಮೂರು ವರ್ಷದ ಖರ್ಚನ್ನು, ಅಕೌಂಟನ್ನು ನೋಡಿಕೊಂಡು ಅದಕ್ಕನುಸಾರವಾಗಿ ಫೈನಾನ್ಸ್ ಕಮಿಷನ್ನಿನವರು ಶಿಫಾರಸು ಮಾಡಿದ್ದಾರೆ. ಅದು ಎರಡು ಕಡೆಯೂ ಹರಿತವಾಗಿರುವ ಕತ್ತಿಯಂತೆ, ಅದರಿಂದ ಎರಡು ಕಡೆಯೂ ಘಾತ ಮಾಡಬಹುದು. ನಾಲ್ಕನೆಯ ಪಂಚವಾರ್ಷಿಕ ಯೋಜನೆ ಬಗ್ಗೆ ಇಷ್ಟು ಹೇಳುವುದು. 350 ಕೋಟಿಗಿಂತ ಕಡಮೆ ನಾಲ್ಕನೆಯ ಯೋಜನೆಗೆ ಸಾಲುವುದಿಲ್ಲ, ನೀರಾವರಿ ಕೆಲಸವನ್ನು ತ್ವರಿತವಾಗಿ ಮಾಡಬೇಕಾದರೆ ಇಷ್ಟು ಬೇಕು, ಇದು ನಾವು ಒದಗಿಸುವ ಹಣ, ಇದರ ಪ್ರಕಾರ ನಮಗೆ ಹಣ ಬರಬೇಕು, ಕೇಂದ್ರ ಸರಕಾರದಿಂದ ಬರಬಹುದು, ಒಟ್ಟು 500 ಕೋಟಿ ರೂಪಾಯಿ ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ ಬೇಕು ಎಂದು ನಿಶ್ಚಯ ಮಾಡಿದ್ದೇವೆ, ಇದಕ್ಕೆ ಮಾನ್ಯ ಸದಸ್ಯರ ಬೆಂಬಲವಿದೆಯೆಂದು ತಿಳಿಯುತ್ತೇನೆ.

ಇನ್ನು ಬ್ಯಾಂಕುಗಳ ವಿಚಾರ. ನನ್ನ ಬಜೆಟ್ ಭಾಷಣದಲ್ಲಿ ನಮ್ಮ ಮೈಸೂರು ರಾಜ್ಯದಲ್ಲಿ ಬ್ಯಾಂಕುಗಳಲ್ಲಿ ಒಟ್ಟು ಶೇಖರವಾಗಿರುವುದು 300 ಕೋಟಿ ರೂಪಾಯಿದೆ, ಮತ್ತು ಬೇರೆ ಬೇರೆ ಭಾಗಗಳಿಗೆ ಸಾಲದ ರೂಪದಲ್ಲಿ ಅಡ್ವಾನ್ಸಾಗಿ ಕೊಟ್ಟಿರುವುದು 166 ಕೋಟಿ ಎಂದು ತಿಳಿಸಿದ್ದೇನೆ, ಅಂದರೆ ಸುಮಾರು 145 ಕೋಟಿ ಹಣ ನಮ್ಮ ಮೈಸೂರಿನಿಂದ ಹೊರಗಡೆಗೆ ಹೋಗಿದೆ. ಇದರ ಅರ್ಥ ನಮ್ಮ ಮೈಸೂರು ದೇಶದ ಅಭಿವೃದ್ಧಿಗೆ ಎಷ್ಟು ಸಹಾಯ ಪಡೆಯಬೇಕೋ ಅಷ್ಟು ಪಡೆದಿಲ್ಲ ಎಂದಾಗುವುದು. ನಿಜವಾಗಿಯೂ ಈ ಮಾತನ್ನು ಒತ್ತಿ ಹೇಳಿದ್ದೇನೆ. ನಮ್ಮಲ್ಲಿರುವ ಬ್ಯಾಂಕುಗಳು ಸರಕಾರಕ್ಕೆ ಅನೇಕ ರೀತಿಯ ಸಹಾಯ ಮತ್ತು ಸಹಕಾರ ಕೊಟ್ಟಿವೆ ಅದಕ್ಕಾಗಿ ನನ್ನ ಬಜೆಟ್ ಭಾಷಣದಲ್ಲಿ ಅವುಗಳಿಗೆ ಅಭಿನಂದನೆ ಸಲ್ಲಿಸಿದ್ದೇನೆ. ಇನ್ನು ಮುಂದೆಯೂ ಕೊಡುತ್ತವೆ ಎಂದು ನಂಬಿದ್ದೇನೆ. ಒಬ್ಬಿಬ್ಬರು ಮಾನ್ಯ ಸದಸ್ಯರು ಬ್ಯಾಂಕುಗಳ ರಾಷ್ಟ್ರೀಕರಣದ ವಿಚಾರವಾಗಿ ಮಾಡಿದ ಭಾಷಣದ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದರು. ಯಾವುದಾದರೂ ಒಬ್ಬ ವ್ಯಕ್ತಿ ಕೇಂದ್ರ ಸರಕಾರದವರು ಕೈಕೊಂಡಂಥ ಯಾವುದೇ ಒಂದು ನಿರ್ಣಯದ ಬಗ್ಗೆ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುವುದು ಒಂದು ಪಾಪ ಎಂದು ಭಾವಿಸುವ ಒಂದು ವಾತಾವಾರಣ ಈಗಿದೆ. ನಾನು ಬ್ಯಾಂಕುಗಳ ರಾಷ್ಟ್ರೀಕರಣವನ್ನು ವಿರೋಧ ಮಾಡಿಲ್ಲ. ಅದು ಸರಿಯಾದ ಹೆಜ್ಜೆ. ಆದರೆ ಬ್ಯಾಂಕುಗಳ ರಾಷ್ಟ್ರೀಕರಣದಲ್ಲಿ ಅಡಗಿರುವ ಮೂರು ಗಂಡಾಂತರಗಳ ಬಗ್ಗೆ ನಾನು ಪ್ರಸ್ತಾಪ ಮಾಡಿದೆ. ಆ ಮೂರು ಯಾವುದು ಎಂದರೆ ಒಂದು ಬ್ಯೂರಾಕ್ರೆಟೈಜೇಷನ್ ಅಧಿಕಾರಶಾಹಿಯ ಬೆಳವಣಿಗೆ. ಸರಕಾರ ರಾಷ್ಟ್ರೀಕರಣ ಮಾಡಿದಮೇಲೆ ಮೊದಲಿದ್ದ ಅನುಕೂಲ ಆಮೇಲೆ ಇಲ್ಲದೆ ಹೋಗಬಹುದು ; ಬ್ಯೂರೋಕ್ರ್ಯಾಟಿಕ್ ನೀತಿ ಬೆಳೆಯಬಹುದು ಎಂಬ ಹೆದರಿಕೆ. ಕೇಂದ್ರ ಸರಕಾರದವರು ಇಷ್ಟು ಪರ್ಸೆಂಟ್ ವ್ಯವಸಾಯಕ್ಕೆ ಕೊಡಬೇಕು, ಕನಿಷ್ಠ ಇಷ್ಟು ಪರ್ಸೆಂಟ್

(ಶ್ರೀ ರಾಮಕೃಷ್ಣ ಹೆಗಡೆ)

ಸ್ಮಾಲ್ ಸ್ಕೇಲ್ ಇಂಡಸ್ಟ್ರಿಗಳಿಗೆ ಕೊಡಬೇಕು ಎಂದು ನಿರ್ಬಂಧ ಮಾಡಿದರು. ಮೊದಲು ಸ್ಟೇಟ್ ಬ್ಯಾಂಕಿನಿಂದ ನಮಗೆ ಸಹಾಯ ಪಡೆಯಲು ಸ್ವಲ್ಪವೂ ತೊಂದರೆಯಿರಲಿಲ್ಲ. ಮುಂದೆ ಬ್ಯೂರಾಕ್ರಾಟಿಕ್ ಪರಿಸ್ಥಿತಿ ಬರಬಹುದು ಎಂಬ ಹೆದರಿಕೆ ಇದೆ. ಎರಡನೆಯ ಹೆದರಿಕೆ ರೆಜಿಮೆಂಟೇಷನ್ ಬರುವುದು ಎಂಬುದು. ಬ್ಯಾಂಕಿಂಗ್ ಸಂಸ್ಥೆಗಳಲ್ಲಿ ಇರುವ ಅನೇಕ ಮಿತ್ರರು ಹಾಗೆ ಹೇಳುತ್ತಾರೆ. ಈಗ 14 ಬ್ಯಾಂಕುಗಳ ರಾಷ್ಟ್ರೀಕರಣವಾಗಿದೆ. ಇಲ್ಲಿಯವರೆಗೆ ರಿಸರ್ವ್ ಬ್ಯಾಂಕಿಗೆ ಇತರ ಬ್ಯಾಂಕುಗಳಮೇಲೆ ಅಧಿಕಾರವಿತ್ತು. ನಿಯಂತ್ರಣ ಮಾಡಲು ಅದಕ್ಕೆ ಅವಕಾಶವಿತ್ತು. ರಾಷ್ಟ್ರೀಕರಣವಾದಮೇಲೆ ರಿಸರ್ವ್ ಬ್ಯಾಂಕಿಗೆ ಕೂಡ ಮೊದಲಿದ್ದ ಅಧಿಕಾರವಿಲ್ಲ, ಒಂದು ಬ್ಯಾಂಕಿಂಗ್ ಇಲಾಖೆಯಾಗಿದೆ. ಯಾವುದೇ ಮಾಡಬೇಕಾದರೂ ರಿಸರ್ವ್ ಬ್ಯಾಂಕ್ ಒಪ್ಪಿಗೆ ಪಡೆಯಬೇಕಾಗಿತ್ತು. ಇಂದು ನಮಗೆ ಅಧಿಕಾರವಿಲ್ಲ, ದೆಹಲಿಯಲ್ಲಿರುವವರನ್ನು ಕೇಳಬೇಕು ಎಂದು ಹೇಳುವರು. ಹೀಗೆ ಹೊಂದಾಣಿಕೆಗಳಿಗೆ ಅವಕಾಶ ಇಲ್ಲದ ಜಿಗಟು ನೀತಿ ಕಂಡುಬರುತ್ತಿದೆ. ಮೂರನೆಯದಾಗಿ ಇಂದು ಬದಲಾಗಿರುವ ರಾಜಕೀಯ ಪರಿಸ್ಥಿತಿಯಲ್ಲಿ ಒಂದು ಪಕ್ಷಕ್ಕೆ ಕೇಂದ್ರ ಸರಕಾರದ ಅಧಿಕಾರ ಹೋಗಿದೆ. ಈಗ ಯಾವುದೇ ಒಂದು ರಾಜ್ಯ ಸರಕಾರ ಕಂಟ್ರೋಲ್ ಮಾಡುವುದಕ್ಕೆ ಪ್ರಭಾವ ಬೀರುವುದಕ್ಕೆ ಸಾಧ್ಯತೆ ಇದೆ, ಹಾಗಾಗುತ್ತದೆ ಎಂದು ನಾನು ಹೇಳುತ್ತಿಲ್ಲ, ಮುಂಜಾಗ್ರತೆ ವಹಿಸುವುದು ಅಗತ್ಯ. ರಾಜಕೀಯ ಪಕ್ಷಗಳಿಂದ ಬ್ಯಾಂಕುಗಳ ದುರುಪಯೋಗಕ್ಕೆ ಅವಕಾಶವಿದೆ.

ಶ್ರೀ ಡಿ. ದೇವರಾಜ ಅರಸ್.—ಪತ್ರಿಕೆಗಳಲ್ಲಿ ರಾಷ್ಟ್ರೀಕರಣಕ್ಕೆ ತಾವು ವಿರುದ್ಧವಾಗಿರುವಂತೆ ಶಿರೋನಾಮೆ ಬರೆದಿದ್ದಾರೆ. ಹಾಗೆ ಅಲ್ಲಿ ಬಂದಾಗಲೇ ಇಲ್ಲವೆಂದು ಹೇಳಿದ್ದರೆ ಒಪ್ಪುತ್ತಿದ್ದರು.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೇ ಈಗ ಹೇಳುವುದು.

ಶ್ರೀ ಎಸ್. ಶಿವಪ್ಪ.—ತಾವು ಸರಕಾರೀಕರಣಕ್ಕೆ ವಿರುದ್ಧವಾಗಿರುವಿರಾ ಅಥವಾ ರಾಷ್ಟ್ರೀಕರಣಕ್ಕೆ ವಿರುದ್ಧವಾಗಿರುವಿರಾ ?

ಶ್ರೀ ರಾಮಕೃಷ್ಣ ಹೆಗಡೆ.—ಇದಕ್ಕೆ ಸೆಲ್ಯೂಷನ್ ಏನು ಎಂಬುದನ್ನು ಹೇಳುತ್ತೇನೆ. ಮೊದಲನೆದು 14 ಬ್ಯಾಂಕುಗಳೇನಿವೆ, ಅವುಗಳನ್ನು ಒಂದುಗೂಡಿಸಬಾರದು, ಅವು ಪ್ರತ್ಯೇಕವಾಗಿ ಇಂಡಿವಿಜುಯಲ್ ಯೂನಿಟ್ ಆಗಿ ಇರಬೇಕು. ಅವುಗಳಿಗೆ ಸಾಕಷ್ಟು ಸ್ವಾತಂತ್ರ್ಯವಿರಬೇಕು. ಅವರಿಗೆ ಪ್ರತಿಯೊಂದಕ್ಕೂ, ಒಂದು ಲಕ್ಷ, ಎರಡು ಲಕ್ಷ ರೂಪಾಯಿ ಸಾಲ ಕೊಡುವಾಗ ರಿಸರ್ವ್ ಬ್ಯಾಂಕ್ ಮತ್ತು ಕೇಂದ್ರ ಸರ್ಕಾರದ ಅಭಿಪ್ರಾಯವನ್ನು ಪಡೆದುಕೊಡತಕ್ಕ ಪರಿಸ್ಥಿತಿ ಇರಕೂಡದು. ಅಲ್ಲಿಂದಲ್ಲಿಯೇ ಡಿಸಿಷನ್ ತೆಗೆದುಕೊಳ್ಳುವ ಅಧಿಕಾರವಿರಬೇಕು. ಇದೆಲ್ಲ ಹೇಳುತ್ತಿದ್ದೆ.

ಶ್ರೀ ಡಿ. ದೇವರಾಜ ಅರಸ್.—ಇದನ್ನೆಲ್ಲ ಬರೆದು ಕಳುಹಿಸಬಹುದಾಗಿತ್ತಲ್ಲ ?

Sri RAMAKRISANA HEGDE.—This Government was one of the first Governments to send a letter to the Prime Minister welcoming this measure. ಈ ಹೊತ್ತು ರಾಷ್ಟ್ರೀಕರಣ ಮಾಡಬೇಕು, ರಾಷ್ಟ್ರೀಕರಣ ಮಾಡಬೇಕು ಎನ್ನುವುದು ದೊಡ್ಡ ಶ್ಲೋಗನ್ ಆಗಿದೆ. ರಾಷ್ಟ್ರೀಕರಣವಾಗಬೇಕು. ನಾವು ಯಾವ ಒಂದು ತತ್ವವನ್ನು ಒಪ್ಪಿಕೊಂಡಿದ್ದೇವೆ ಅದರಂತೆ ಉತ್ಪಾದನೆ ಹೆಚ್ಚಬೇಕಾದರೆ ಜನತೆಯ ಕಂಟ್ರೋಲ್ ಇರಬೇಕು. ಇದು ಅಪರಿಹಾರವಾದುದು. ಸಮಾಜವಾದದಲ್ಲಿ ನಂಬಿಕೆ ಇದ್ದರೆ ಅದನ್ನು ಒಪ್ಪಿಕೊಳ್ಳಲೇ ಬೇಕು. ಯಾವುದನ್ನು ರಾಷ್ಟ್ರೀಕರಣ ಮಾಡಬೇಕು, ಯಾವ ರೀತಿ ಮಾಡಬೇಕು, ಪಬ್ಲಿಕ್ ಸೆಕ್ಟಾರಿನಲ್ಲಿ ಯಾವುದನ್ನು ತೆರೆಯಬೇಕು, ಯಾವುದನ್ನು ತೆರೆಯಬಾರದು ಎನ್ನುವುದರ ಬಗ್ಗೆ ಪ್ರಯಾರಿಟಿ ಹಾಕಬೇಕು. ಅಂಥ ದೃಷ್ಟಿಯಿಂದ, ಎಲ್ಲ ಕಣ್ಣು ತೆರೆದುಕೊಂಡು ತೀರ್ಮಾನ ಮಾಡಬೇಕು. ಉದಾಹರಣೆ ಕೊಡುವುದಾದರೆ ಹೋಟೆಲ್ ಉದ್ಯಮವನ್ನು ರಾಷ್ಟ್ರೀಕರಣ ಮಾಡಬೇಕು ಎಂದರೆ ಯಾರು ಒಪ್ಪುತ್ತಾರೆ ?

ಶ್ರೀ ಆರ್. ದಯಾನಂದ ಸಾಗರ್.—ಬ್ಯಾಂಕ್ ರಾಷ್ಟ್ರೀಕರಣ ಮಾಡಬಾರದಾಗಿತ್ತೇ ?

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಹೇಳುತ್ತಿಲ್ಲ ಸಿನಿಮಾಗಳು, ಇಂಥವುಗಳ ರಾಷ್ಟ್ರೀಕರಣ ಮಾಡಬಾರದು.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಓದಿರುವಷ್ಟು ಕಮ್ಯೂನಿಸ್ಟ್ ತತ್ವವನ್ನು ನಾನೂ ಓದಿದ್ದೇನೆ. Lenin was prepared for two steps forward and one step backward ಅದಕ್ಕಾಗಿ ಪ್ರತಿಯೊಂದನ್ನೂ ರಾಷ್ಟ್ರೀಕರಣ ಮಾಡಬೇಕು. ರಾಷ್ಟ್ರೀಕರಣ ಮಾಡಬೇಕು ಎಂದರೆ ಆಗುವುದಿಲ್ಲ. ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ಸ್ ಬಗ್ಗೆ ಒಂದು ಟೀಕೆ ಮಾಡಿದರೆ ಅಪರಾಧವಾಗುತ್ತದೆ, ತಕ್ಷಣವೇ ರೀ ಆಕ್ಷನ್ ಆಗುತ್ತದೆ. I have no business to fritter away the public money. ನಾಲ್ಕು ಸಾವಿರ ಕೋಟಿ ರೂಪಾಯಿ ಜನತೆಯ ಹಣವನ್ನು ಇದರಲ್ಲಿ ಹಾಕಿದ್ದೇವೆ. ಸ್ಟೀಲ್ ಪ್ಲಾಂಟಿನಿಂದ 30 ಕೋಟಿ ರೂಪಾಯಿ ನಷ್ಟವಾಗುತ್ತದೆ, ಅದನ್ನು ಸರಿಪಡಿಸಬೇಕು ಎಂದು ಹೇಳಿದರೆ ತಪ್ಪೇನು ?

ಶ್ರೀ ಡಿ. ದೇವರಾಜ ಅರಸ್.—ಸರಿಯಾಗಿ ನಡೆಸಬೇಡಿ ಎಂದು ಯಾರು ಅಡ್ಡಿ ಮಾಡಿದ್ದಾರೆ ಸ್ವಾಮಿ ? ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ಸ್‌ನಲ್ಲಿ ಕೆಲಸಕ್ಕೆ ಬಾರದೆ ಇದ್ದವರನ್ನೆಲ್ಲ ಮ್ಯಾನೇಜಿಂಗ್ ಡೈರೆಕ್ಟರುಗಳನ್ನಾಗಿ ಮಾಡಿ ಹಾಳುಮಾಡಿಕೊಂಡರೆ ಜವಾಬ್ದಾರಿ ಯಾರದು ?

SRI R. DAYANANDA SAGAR.—My dear Finance Minister, I tell you : If any body were to come in the way of introducing socialistic way of life, he will be simply washed away.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಕಳೆದ ವರ್ಷ ಜುಲೈ ತಿಂಗಳಿನಲ್ಲಿ ಒಂದು ದೊಡ್ಡ ಚಮತ್ಕಾರ ಈ ದೇಶದಲ್ಲಿ ನಡೆದು ಹೋಯಿತು. ಅದೇನೆಂದರೆ, ಕೆಲವು ಕಡೆ ಪತ್ರಿಕೆಗಳಲ್ಲಿ ಓದಿರುವ ಹಾಗೆ ಲಿಂಗ ಬದಲಾವಣೆ ಓವರ್‌ನೈಟ್ ಆಗಿರುವ ಪ್ರಕಾರ ಕೆಲವು ಜನ ನಮ್ಮ ಸ್ನೇಹಿತರು ಓವರ್‌ನೈಟ್ ಬದಲಾಗಿದ್ದಾರೆ. ಇದು ನನಗೆ ಅರ್ಥವಾಗಲಿಲ್ಲ. ಜುಲೈನಲ್ಲಿ ಏನು ಬಾತೋ, ಏಕ್‌ದಂ ಸಮಾಜವಾದಿಗಳಾಗಿದ್ದಾರೆ.

ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್ ಸರಿಯಾಗಿ, ತೃಪ್ತಿಕರವಾಗಿ, ಕೆಲಸ ಮಾಡಲೇಬೇಕಾದರೆ, ಮೂರು ಪ್ರೀ ರಿಕ್ವಿಸಿಟ್ಸ್ ಇವೆ. ಒಂದು, ಕೆಲಸ ಮಾಡತಕ್ಕ ಎಲ್ಲ ಜನರಿಗೆ, ಛೇರ್‌ಮನ್, ಮ್ಯಾನೇಜಿಂಗ್ ಡೈರೆಕ್ಟರಿನಿಂದ ಹಿಡಿದು ಸಾಮಾನ್ಯ ಒಬ್ಬ ಕೂಲಿಗಾರನವರೆಗೆ, ಅದು ತನ್ನ ಕೈಗಾರಿಕೆ, ತನ್ನ ದೇಶದ ಕೈಗಾರಿಕೆ, ಎನ್ನುವ ಪ್ರೇಮ ಬೇಕು, ದೇಶಪ್ರೇಮ ಬೇಕು ; ಎರಡನೆಯದು ಅತಿ ಶ್ರೇಷ್ಠವಾಗಿ ಕಾರ್ಯ ಮಮತೆ ಇರಬೇಕು, ಮೂರನೆಯದು ಡಿಸಿಷನ್ ತೆಗೆದುಕೊಳ್ಳುವಾಗ ಸಂಪೂರ್ಣವಾದ ಜವಾಬ್ದಾರಿಯನ್ನು ನಾವು ಕೊಡಬೇಕು. ಯಾರಾದರೂ ಅಂಥ ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿ ವಿಫಲರಾದರೆ ಅವರನ್ನು ಗಲ್ಲಿಗೆ ಹಾಕಬೇಕು. ಇದನ್ನು ಪ್ರಜಾಪ್ರಭುತ್ವದಲ್ಲಿ ಮಾಡುವುದು ಸಾಧ್ಯವೋ ಎಂದು ಕೇಳುತ್ತೇನೆ. ಪ್ರಜಾಪ್ರಭುತ್ವದಲ್ಲಿ ಇದು ಸಾಧ್ಯವಿಲ್ಲ.

ಶ್ರೀ ಆರ್. ದಯಾನಂದ ಸಾಗರ್.—ಎಷ್ಟು ಜನರನ್ನು ಗಲ್ಲಿಗೆ ಹಾಕಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ವಿಜಿಲೆನ್ಸ್ ಕಮಿಷನ್ ರಿಪೋರ್ಟನ್ನು ನಮಗೆ ಕೊಟ್ಟಿದ್ದಾರೆ, ಏನು ಮಾಡಿದ್ದಾರೆಂಬುದನ್ನು ನೋಡಿಕೊಳ್ಳಲಿ.

ಶ್ರೀ ಎಂ. ಎಸ್. ಕೃಷ್ಣನ್.—ಈ ತತ್ವಗಳನ್ನು ಅನುಷ್ಠಾನಕ್ಕೆ ತನ್ನಿ, ಡೆಮಾಕ್ರಟೈಜೇಷನ್ ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಕೃಷ್ಣನ್ ಅವರ ರಾಜ್ಯ ಬಂದರೆ ಆಗಬಹುದು. ಪಶ್ಚಿಮ ಬಂಗಾಳದಲ್ಲಿ ಮತ್ತು ಕೇರಳದಲ್ಲಿ ಏನಾಗುತ್ತಿದೆ ಎಂಬುದನ್ನು ನೋಡುತ್ತಿದ್ದೇವೆ. ಏನೂ ಆಗಿಲ್ಲ. ಇಡೀ ದೇಶದೊಳಗೆ ಅವರದೇ ಆಡಳಿತ ಬಂದರೆ ಬಹುಶಃ ಇದು ಸಾಧ್ಯ. ನಾನು ಒಂದೇ ಒಂದು ಆಹ್ವಾನವನ್ನು ಕೊಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಸಾಧ್ಯವಿಲ್ಲ ಎನ್ನುವುದಾದರೆ ಏಕೆ ಸಾಧ್ಯವಿಲ್ಲ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಡೆಮಾಕ್ರಸಿ ಮೆಷಿನರಿಯಲ್ಲಿ ಇನ್‌ಕಾಂಪಿಟೆನ್ಸಿ ಇನ್‌ಹೆರಿಟ್ ಆಗಿದೆ. No democracy is free from incompetency and inefficiency.

ಪ್ರಾಯೋಗಿಕವಾಗಿ, ನಾನು ಒಂದು ಆಹ್ವಾನವನ್ನು ಕೊಡುತ್ತೇನೆ. ನಮ್ಮ ಸ್ನೇಹಿತರಲ್ಲಿ ಯಾರಾದರೂ ಮುಂದೆ ಬರಲಿ, ನಮ್ಮ ಹತ್ತಿರ ಅನೇಕ ಕೈಗಾರಿಕೆಗಳಿವೆ. ಅವುಗಳಲ್ಲಿ ಭದ್ರಾವತಿ ಕಬ್ಬಿಣದ ಕಾರ್ಖಾನೆ ಮತ್ತು ಎನ್. ಜಿ. ಇ. ಎಫ್ ಕೊಡುವುದಕ್ಕೆ ತಯಾರಿಲ್ಲ. ಇವೆರಡನ್ನು ಬಿಟ್ಟು

(ಶ್ರೀ ರಾಮಕೃಷ್ಣ ಹೆಗಡೆ)

ಬೇರೆ ಒಂದು ಕಾರ್ಖಾನೆಯನ್ನು ತೆಗೆದುಕೊಳ್ಳಲಿ, ಅಲ್ಲಿಯ ಕೆಲಸಗಾರರ ಸಂಪೂರ್ಣವಾದ ಜವಾಬ್ದಾರಿಯನ್ನು ತೆಗೆದುಕೊಳ್ಳಲಿ, ನಾವು ಹಾಕಿದ ಬಂಡವಾಳದ ಮೇಲೆ 10 ಪರ್ಸೆಂಟ್ ಉತ್ಪತ್ತಿ ಕೊಡಲಿ. ಅವರಿಗೆ ಸಂಪೂರ್ಣವಾದ ಅಧಿಕಾರವನ್ನು ಕೊಡುತ್ತೇವೆ, ಅವರು ನೂರಕ್ಕೆ 10ರಂತೆ ಪ್ರತಿಫಲವನ್ನು ಕೊಡಬೇಕು.

ಶ್ರೀ ಡಿ. ದೇವರಾಜ ಅರಸ್.—ಛೇರ್‌ಮನ್ ಷಿಪ್ ತೆಗೆದುಕೊಳ್ಳಬೇಕು ಎಂದು ಹೇಳುತ್ತೀರಾ? ಆ ತರಹ ಛಾಲೆಂಜ್ ಮಾಡಬಾರದು. ಇವುಗಳನ್ನು ನಡೆಸುವುದಕ್ಕೆ ಕೈಯಲ್ಲಿ ಆಗುವುದಿಲ್ಲ, ನಡೆಸುವುದಕ್ಕೆ ಶಕ್ತಿ ಇಲ್ಲ ಎಂದು ಒಪ್ಪಿಕೊಳ್ಳಿ. ಛೇರ್‌ಮನ್‌ಷಿಪ್ ಕೊಡುತ್ತೇವೆ ಎನ್ನುವ ಆಶೆಯನ್ನು ತೋರಿಸಬೇಡಿ.

ಶ್ರೀ ಎಂ. ಎಸ್. ಕೃಷ್ಣನ್.—ಅವರೆಲ್ಲಾ ನುಂಗಿ ಹಾಕಿದ್ದಾರೆ. ಏನೂ ಉಳಿದಿಲ್ಲ ದಿವಾಳಿಯಾಗಿದೆ.

Mr. SPEAKER.—The hon. Members may ask some clarification. But they cannot go on making a speech or a running commentary. At that rate, how is the Hon. Minister to complete his reply?

Sri D. DEVARAJ URS.—I think this is inevitable in a democratic system and parliamentary system.

Mr. SPEAKER.—I have understood parliamentary system much better.

Sri RAMAKRISHNA HEGDE.—I have no objection as long as it does not become continuous interruption.

Sri H. SIDDAVEERAPPA.—The Hon. Finance Minister is such an interesting personality that these interruptions have become inevitable.

Mr. SPEAKER.—If the Hon. Minister has no objection, I will not come in the way.

ಶ್ರೀ ರಾಮಕೃಷ್ಣ ಹೆಗಡೆ.—ಈಗ ನಮ್ಮ ಮೈಸೂರು ರಾಜ್ಯದಲ್ಲಿ ಸುಮಾರು 160 ಕೋಟಿ ರೂಪಾಯಿಗಳಷ್ಟು ಹಣವನ್ನು ಬೇರೆ ಬೇರೆ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಹಾಕಿದ್ದೇವೆ, ಇದರಿಂದ ಬರತಕ್ಕ ಉತ್ಪನ್ನವೇನೂ ಇಲ್ಲ ಎಂದರೆ ಅದು ಅತಿಶಯೋಕ್ತಿ ಆಗಲಾರದು. ಕಳೆದ ವರ್ಷ 1968-69 ರಲ್ಲಿ ರವೋಕ್ಕೇದಲ್ಲಿ ಆದಂಥ ನಷ್ಟ 47.47 ಲಕ್ಷ ರೂಪಾಯಿ, ಎನ್. ಜಿ. ಇ. ಎಫ್. ನಲ್ಲಿ ಆದದ್ದು 143.33 ಲಕ್ಷ ರೂಪಾಯಿ ನಷ್ಟ, ಮೈಸೂರು ಐರನ್ ಅಂಡ್ ಸ್ಟೀಲ್‌ನಲ್ಲಿ ಆದಂಥ ನಷ್ಟ 306.46 ಲಕ್ಷ. ಹಟ್ಟಿ ಗೋಲ್ಡ್‌ಮೈನ್ಸ್‌ನಲ್ಲಿ ಆದಂಥ ಲಾಭ 17.49 ಲಕ್ಷ, ಮೈಸೂರು ಷುಗರ್ಸ್‌ನಲ್ಲಿ ಕಳೆದ ವರ್ಷ ಆದ ನಷ್ಟ 32.27 ಲಕ್ಷ ರೂಪಾಯಿ, ಎಂ. ಎಸ್. ಕೆ. ಮಿಲ್ಸ್‌ನಲ್ಲಿ ಆದ ನಷ್ಟ 23.12 ಲಕ್ಷ ರೂಪಾಯಿ, ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಆದಂಥ ಲಾಭ 5.96 ಲಕ್ಷ ರೂಪಾಯಿ.

Small Scale Industries Corporation—Profit	...	2.08 lakhs
State Finance Corporation—Profit	...	14.95 lakhs
M.S.R.T.C.—Profit	...	1.34 crores
M.S.E.B.—Interest due 324 lakhs—Profit	...	252 lakhs

Co-operatives—investment 25 crores—dividend 1966-67 0.33 lakhs, 1967-68 0.85 lakhs. ಇಷ್ಟು ರಿಟರ್ನ್ಸ್ ನಮ್ಮ ಷೇರ್ ಕ್ಯಾಪಿಟಲ್ಲಿನ ಮೇಲೆ ಡಿವಿಡೆಂಡ್ ರೂಪದಲ್ಲಿ ಬಂದಿದೆ.

ಶ್ರೀ ಎಸ್. ಶಿವಪ್ಪ.—ಆ ಸಂಸ್ಥೆಗಳಲ್ಲಿ ಹಣ ದುರುಪಯೋಗ ಮಾಡಿದ್ದವರ ಬಗ್ಗೆ ಎಷ್ಟು ಜನರ ಮೇಲೆ ಕೇಸ್ ಹಾಕಿದ್ದೀರಿ ? ಎಷ್ಟು ಜನಕ್ಕೆ ಶಿಕ್ಷೆ ಮಾಡಿಸಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ವಿರೋಧಪಕ್ಷದ ನಾಯಕರು ತಾವು ಈ ಅಧಿಕಾರದಿಂದ ಬಹಳ ದೂರದಲ್ಲದ್ದೀವೆಂದು ತಿಳಿಯಬಾರದು. ತಮಗೂ ಈ ಜವಾಬ್ದಾರಿಯನ್ನು ಹೊತ್ತು ಕೆಲಸ ಮಾಡತಕ್ಕ ಕಾಲ ಸದ್ಯದಲ್ಲೇ ಬರಬಹುದು. ಆಗ ತಾವು ಈ ದಿವಸ ಏನು ಹೇಳಿದ್ದೀರಿ ಈ ಮಾತುಗಳನ್ನು ಮುಂದಿನವರು ತಮಗೂ ಕೊಡ ಮಾಡಬಹುದು.

Sri H. SIDDAVEERAPPA.—What are you aiming at, by giving these figures ? I want to know the object for it. I know probably Government is paying their way to hand over REMCO. ತಾವು ಆ ರೆಂಕೋ ಕಂಪೆನಿಯನ್ನು ಯಾರಿಗೋ ಕೊಡಬೇಕೆಂದು ಮಾಡಿದ್ದೀರಿ. ಅದಕ್ಕಾಗೇ ಇದನ್ನೆಲ್ಲಾ ಈಗ ಹೇಳುತ್ತಿದ್ದೀರಿ......

ಶ್ರೀ ರಾಮಕೃಷ್ಣ ಹೆಗಡೆ.—ನಾನು ಏತಕ್ಕಾಗಿ ಆ ಸ್ಟೇಟಿನಲ್ಲಿ ವಿಷಯ ಎತ್ತಿದೆನೆಂದರೆ...... Sir, this has become too much. I welcome interjections here and there. Did I provoke when you were speaking ?

Sri S. SIVAPPA.—The Finance Minister is making serious observations. Statism, democracy, are all matters of policy. We cannot take them so easily.

Sri RAMAKRISHNA HEGDE.—Let him consider with all seriousness. What I want to say is, if any questions or clarifications are to be asked or observations to be made, they are welcome at the end of the speech.

Sri D. DEVARAJ URS.—When you are treading dangerous grounds, we want to know all those things. When you say that democracy is not suited, we want to know what is the inherest difficulty in it ?

Sri RAMAKRISHNA HEGDE.—My friends would refresh their memory by reading some books on political theory. Everybody accepts that democracy is best in spite of its inefficiency. Democracy is inefficient and expensive. These are the things which have been accepted and seen. They are inherent in the very system.

Sri S. SIVAPPA.—You are entering into fundamentals. We cannot take them easy. Let us have a full discussion on that.

Sri RAMAKRISHNA HEGDE.—I am not going into the realm of political thought. I want to refer to them to the extent necessary to strengthen my argument on the public sector.

ನಾನು ಈಗ ಹೇಳಿದ ಪಬ್ಲಿಕ್ ಸೆಕ್ಟಾರ್ ವಿಷಯದಲ್ಲಿ ಕೆಲವು ಅಗತ್ಯವಾದ ವಿಷಯಗಳಿರುತ್ತವೆ. ಅವುಗಳನ್ನು ಪೂರೈಸಲೇಬೇಕು. ಡೆಮಾಕ್ರೆಸಿಯಲ್ಲಿ ನಾವು ಅಷ್ಟು ರಿಜಿಡ್ಡಾಗಿ ಕಾನೂನಿಗೆ ಅಂಟಿಕೊಂಡು ಕೆಲಸ ಮಾಡುವುದಕ್ಕಾಗುವುದಿಲ್ಲ. ರಷ್ಯಾ ದೇಶದಲ್ಲಾದರೂ ಲೆನಿನ್ ಏನು ಮಾಡಿದ ? ಒಳ್ಳೆಯ ಕೆಲಸ ಮಾಡಿದವರಿಗೆ ರಿವಾರ್ಡ್ ಕೊಟ್ಟ; ನಿಸ್ಪೃಹತೆಯಿಂದ ಕೆಲಸ ಮಾಡಿದ್ದವರಿಗೆ ಶಿಕ್ಷೆ ಮಾಡಿದ......

Sri M. S. KRISHNAN.—Why are you treading on dangerous grounds ?

Sri RAMAKRISHNA HEGDE.—It is an outright confession that communism is dangerous.

Sri M. S. KRISHNAN.—What you are saying is absolutely nonsense.

Mr. SPEAKER.—It is for the House to see which is sensible and which is not.

Sri RAMAKRISHNA HEGDE.—I can only sympathise with my friend Sri Krishnan for his limited sense. If he cannot make sense all that I have to say is to sympathise with him.

Sri M. S. KRISHNAN.—I know much better English than you do.

Mr. SPEAKER.—We are not sitting here in judgment over the knowledge of English of any body.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಸ್ಟೇಟಿಜಂ ವಿಷಯವನ್ನು ಏತಕ್ಕಾಗಿ ಹೇಳುತ್ತಿದ್ದೆ ಎಂದರೆ– ಈಗ ಹೊಸದಾಗಿ ಕೆಲವು ಸಮಸ್ಯೆಗಳು ದೇಶದ ಮುಂದೆ ಉದ್ಭವಿಸಿವೆ. ಅವುಗಳಲ್ಲಿ ಮೊದಲನೆಯದು ಕಮಿಟೆಡ್ ಟು ಸಿವಿಲ್ ಸರ್ವಿಸಸ್, ಎರಡನೆಯದು ರಿಮೂವಲ್ ಆಫ್ ರೈಟ್ ಟು ಪ್ರಾಪರ್ಟಿ. ಈ ಎರಡೂ ಫಂಡಮೆಂಟಲ್ ರೂಲ್ಸುಗಳಿಗೆ ವಿರುದ್ಧವಾಗಿರುವುದೇ ಅಲ್ಲದೆ ಇವು ಡೆಮಾಕ್ರಸಿಯ ಲಕ್ಷಣವೂ ಅಲ್ಲ. If it is committed to the country's general welfare, committed to the public service, it is quite O. K. I think we have a good civil service. I can take legitimate pride that in Mysore we have a civil service which is committed in this sense. But if we want committed civil service in the sense they have to act according to the likes and dislikes of the ministers or according to the whims and fancies or the ideology of the Cabinet; I am sorry it is a very dangerous proposition. Next, fundamental rights to the properties. The essence of democracy is freedom of thought, freedom of expression and freedom to hold property.

Sri M. S. KRISHNAN.—What is the definition of property?

Sri RAMAKRISHNA HEGDE.—Property is not unlimited. It is defined in the constitution. The State has authority to acquire property but only according to law, according to the process prescribed by law. Once this right is removed then there would not be any difference between our country and the country where totalitarian regime has been established.

ಅದಕ್ಕಾಗಿ ಮಾನ್ಯ ಸದಸ್ಯರು ಕೆಲವರು ನೀವು ಹೇಳಿರುವಂಥಾದ್ದೆಲ್ಲಾ ಸೋಷಿಯಲಿಸ್ಟಿಕ್ ಪ್ರಿನ್ಸಿಪಲ್, ನೀವು ಮಾಡಿರುವುದು ಏನು ಎಂದು ಕೇಳಿದರು. ಅದಕ್ಕಾಗಿ ನಾನು ಹೇಳಬಯಸುತ್ತೇನೆ. ನಮ್ಮ ಮೈಸೂರು ರಾಜ್ಯದಲ್ಲಿ ವೆಲ್‌ಫೇರ್ ಮೆಷರ್ಸನ್ನು ತೆಗೆದುಕೊಂಡಿದ್ದೇವೆ. ಈಗ ನಾವು ಕೈಗೊಂಡ ಅನೇಕ ಕಾರ್ಯಕ್ರಮಗಳು ಇನ್ನೂ ಇತರ ರಾಜ್ಯಗಳು ಯಾವುವೂ ಕೈಗೊಂಡಿಲ್ಲ ಎಂದು ಹೇಳಬಯಸುತ್ತೇನೆ.

8-00 P.M.

ಶ್ರೀ ಆರ್. ದಯಾನಂದಸಾಗರ್.—ಹಿಂದೆಯೇ ಇವೆಲ್ಲಾ ಆಗಿತ್ತು.

ಶ್ರೀ ರಾಮಕೃಷ್ಣ ಹೆಗಡೆ.—ಹಿಂದೆ ಆಗದೇ ಇರುವುದೇ ಈಗ ಆಗುತ್ತಾ ಇವೆ. ಅವುಗಳನ್ನು ಹೆಚ್ಚಾಗಿ ಹೇಳುವುದಕ್ಕೆ ಹೋಗುವುದಿಲ್ಲ.

ಮೊದನೆಯದಾಗಿ ಲ್ಯಾಂಡ್ ರಿಫಾರಂಸ್‌ನ್ನು ಪಾಸ್ ಮಾಡಿರುವುದರಲ್ಲಿ ನಮ್ಮ ರಾಜ್ಯವೇ ಮೊದಲನೆಯದು. ಸಣ್ಣ ಪುಟ್ಟ ರೈತರಿಗೆ ಅನುಕೂಲತೆಗಳನ್ನು ಒದಗಿಸಿಕೊಟ್ಟಿರುವುದರಲ್ಲಿ ಕೆಲವು ರಾಜ್ಯಗಳಲ್ಲಿ ಇದು ಒಂದು. ಮಿನಿಮಮ್ ವೇಜಸ್‌ನ್ನು ಮೊನ್ನೆ ತಾನೇ ಮದ್ರಾಸ್‌ನವರು ಮಾಡಿದರು. ಅಗ್ರಿಕಲ್‌ಚರಲ್ ಲೇಬರರ್ಸ್ ಮತ್ತು ಇತರ ಕೂಲಿಗಾರರಿಗೂ ಮಿನಿಮಮ್ ವೇಜಸ್ ಕೊಡಬೇಕೆಂದು ಮಾಡಿದ್ದೇವೆ.

ಶ್ರೀ ಎಸ್. ಶಿವಪ್ಪ.—ನೀವು ಕಾನೂನು ಮಾಡಿದ್ದೀರಿ, ಆಚರಣೆಯಲ್ಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ರಾಜ್ಯದಲ್ಲಿ ಎಸ್. ಎಸ್. ಎಲ್. ಸಿ. ಯವರೆಗೂ ಪುಕ್ಕಟೆ ಉಚಿತ ಶಿಕ್ಷಣ ಮಾಡಿದ್ದೇವೆ. ಹರಿಜನ, ಗಿರಿಜನರ ಉದ್ಧಾರಕ್ಕಾಗಿ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದೇವೆ. ಇದರ ಅರ್ಥ ಏನೆಂದರೆ ನಮ್ಮ ಸರ್ಕಾರದವರು ಸಮತಾವಾದದ ದಾರಿಯಲ್ಲಿ ದಿಟ್ಟವಾದಂಥ ಮತ್ತು ಸ್ಪಷ್ಟವಾದಂಥ ಅನೇಕ ಕರ್ಯಕ್ರಮಗಳನ್ನು ಕೈಕೊಂಡಿದ್ದಾರೆ. ಆರ್ಥಿಕ ದೃಷ್ಟಿಯಿಂದ ಇನ್ನೂ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ; ಇದರ ಬಗ್ಗೆ ಸರ್ಕಾರಕ್ಕೆ ಸಾಕಷ್ಟು ಎಚ್ಚರಿಕೆ ಇದೆ ಎಂದು ನಾನು ಹೇಳಬಯಸುತ್ತೇನೆ.

ಕೊನೆಯದಾಗಿ ಇನ್ನು ಸಹಕಾರ ಸಂಘಗಳ ಬಗ್ಗೆ ಮೊನ್ನೆ ಒಂದುಕಡೆ ಏನು ಭಾಷಣ ಮಾಡಿದೆ ಅದರ ಬಗ್ಗೆ ಬಹಳಷ್ಟು ಸದಸ್ಯರು ಪ್ರಸ್ತಾಪ ಮಾಡಿದರು. ಸಹಕಾರಿ ಕ್ಷೇತ್ರದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುತ್ತಾ ಸಹಕಾರಿ ಕ್ಷೇತ್ರದಲ್ಲಿ ನಡೆಯುತ್ತಾ ಇರತಕ್ಕಂಥ ಸಹಕಾರಿ ಸಂಸ್ಥೆಗಳಿಂದ ಯಾವ ಪ್ರಯೋಜನವೂ ಇಲ್ಲ, ಎಲ್ಲಾ ಅಪವ್ಯಯವಾಗುತ್ತಿದೆ ಎನ್ನುವ ಅರ್ಥ ಬರುವ ರೀತಿಯಲ್ಲಿ ಭಾಷಣ ಮಾಡಿದರು. ಈ ಸಹಕಾರಿ ಕ್ಷೇತ್ರ ಇನ್ನೂ ಹೆಚ್ಚಾಗಿ ಬೆಳೆಯಬೇಕು ಎನ್ನುವುದರಲ್ಲಿ ವಿಶ್ವಾಸ ಇರತಕ್ಕಂಥ ವ್ಯಕ್ತಿ ನಾನು. ಈ ರಾಜ್ಯದಲ್ಲಿ ಇರತಕ್ಕಂಥ ಎಲ್ಲ ಸಹಕಾರಿ ಸಂಸ್ಥೆಗಳೂ ಕೂಡ ಕೆಟ್ಟು ಹೋಗಿವೆ, ಎಲ್ಲ ಸಹಕಾರಿ ಸಂಸ್ಥೆಗಳಲ್ಲೂ ದುರುಪಯೋಗ ನಡೆಯುತ್ತಾ ಇದೆ, ಎಲ್ಲ ಸಹಕಾರಿ ಸಂಸೆಗಳಲ್ಲೂ ರಾಜಕೀಯ ನಡೆಯುತ್ತಾ ಇದೆ ಎನ್ನುವ ಒಂದು ತೀರ್ಮಾನಕ್ಕೆ ನಾವು ಒಮ್ಮೆಲೆ ಬರಕೂಡದು.

Sri H. SIDDAVEERAPPA.—You appoint a committee.

ಶ್ರೀ ರಾಮಕೃಷ್ಣ ಹೆಗಡೆ.—1955-56 ರಲ್ಲಿ ಸರ್ಕಾರದಿಂದ ಸಹಕಾರ ಸಂಘಗಳಿಗೆ ಕೊಟ್ಟಿರುವ ಸಾಲ 5 ಕೋಟಿ 54 ಲಕ್ಷ ಇದ್ದರೆ ಈಗ ಅದು 2 ಕೋಟಿ 40 ಲಕ್ಷಕ್ಕೆ ಇಳಿದಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಸಹಕಾರಿ ಸಂಘಗಳು ಬೆಳೆದಿವೆ. ನನ್ನ ಖಂಡಿತವಾದ ಒಂದು ಅಭಿಪ್ರಾಯ ಏನೆಂದರೆ ಈ ಸಹಕಾರಿ ಸಂಸ್ಥೆಗಳಲ್ಲಿ ಯಾವರೀತಿಯಾಗಿಯೂ ಪಟ್ಟಭದ್ರ ಆಸಕ್ತಿ ಬೆಳೆಯಕೂಡದು. ಅವುಗಳಲ್ಲಿ ಯಾವರೀತಿಯಾಗಿಯೂ ರಾಜಕೀಯ ಇರಕೂಡದು. ರಾಜಕೀಯದಿಂದ ನಿರ್ಲಿಪ್ತವಾಗಿರಬೇಕು. ಈ ಸಹಕಾರಿ ಸಂಸ್ಥೆಗಳು ಸರ್ಕಾರದಮೇಲೆ ಯಾವ ರೀತಿಯಾಗಿಯೂ ಅವಲಂಬಿಸಿರಕೂಡದು.

ಶ್ರೀ ಎಸ್. ಶಿವಪ್ಪ.—ನೀವು ಹೇಳಿದ ಹಾಗೆ ಎಷ್ಟು ಸೊಸೈಟಿಗಳು ಅವಲಂಬಿಸದೆ ಇವೆ ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ಹೇಳುವುದಾದರೆ ನಮ್ಮ ಗೋಕರ್ಣದಲ್ಲಿ ಒಂದು ಅರ್ಬನ್ ಬ್ಯಾಂಕ್ ಇದೆ. ಯಾವರೀತಿಯಾಗಿಯೂ ಆ ಅರ್ಬನ್ ಬ್ಯಾಂಕ್ ಸರ್ಕಾರದಿಂದ ಒಂದು ಕಾಸನ್ನೂ ಸಹಾಯ ಪಡೆದುಕೊಂಡಿಲ್ಲ. ಅರ್ಬನ್ ಬ್ಯಾಂಕ್ ಯಾವ ರೀತಿಯಾಗಿಯೂ ಸಾಲ ಮಾಡುತ್ತಾ ಇಲ್ಲ. ಆ ಬ್ಯಾಂಕ್ 100 ಕ್ಕೆ 90 ರಷ್ಟು ಚೆನ್ನಾಗಿ ಕೆಲಸ ಮಾಡುತ್ತಾ ಇದೆ.

ಶ್ರೀ ಎಚ್. ಸಿದ್ದವೀರಪ್ಪ. —ಅರ್ಬನ್ ಬ್ಯಾಂಕ್‌ನಿಂದ ಕೋಆಪರೇಟೀವ್ ಸಾಲ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಕೋಆಪರೇಟೀವ್‌ನವರು ಸಾಲ ತೆಗೆದುಕೊಳ್ಳಬಹುದು. ಸಾಮಾನ್ಯವಾಗಿ ಅರ್ಬನ್ ಬ್ಯಾಂಕ್ ಚೆನ್ನಾಗಿ ಕೆಲಸ ಮಾಡುತ್ತಾ ಇದೆ. ಸರ್ಕಾರದಿಂದ ಅವರಿಗೆ ಯಾವ ರೀತಿಯಾಗಿಯೂ ಸಬ್ಸಿಡಿ ಸಿಕ್ಕುವುದಿಲ್ಲ ಮತ್ತು ಯಾವ ಸಹಾಯವೂ ಸಿಕ್ಕುವುದಿಲ್ಲ. ಮತ್ತು ಸರ್ಕಾರದಿಂದ ಸಂಪೂರ್ಣ ಸಹಾಯ ಸದಾಕಾಲ ಸಿಕ್ಕುವುದಿಲ್ಲ. ಈ ಸಹಕಾರಿ ಕ್ಷೇತ್ರದಲ್ಲಿರುವ ಸಹಕಾರಿ ಸಂಸ್ಥೆಗಳು ಹಾಗೆ ಅವಲಂಬನೆ ಮಾಡಕೂಡದು ಎಂದು ಹೇಳುತ್ತೇನೆ. ತಮ್ಮ ಸ್ವಯಂಶಕ್ತಿ ಅವುಗಳಲ್ಲಿ ಬೆಳೆದು ಬರಬೇಕು. ಈ ಸಹಕಾರಿ ಸಂಸ್ಥೆಗಳು ಪ್ರಾರಂಭವಾಗುವ ಕಾಲದಲ್ಲಿ ಸಹಾಯ ಮಾಡಲಿಕ್ಕೆ ಸರ್ಕಾರ ಸಿದ್ಧ ಇದೆ. ಆ ರೀತಿ ಸರ್ಕಾರವನ್ನು ಅವಲಂಬಿಸುವುದು ಕ್ರಮೇಣವಾಗಿ ಕಡಿಮೆ ಆಗಬೇಕು ಎಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ನೀವು ಸತ್ಯದಿಂದ ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಈವೊತ್ತು ಸತ್ಯದಿಂದ ಹೇಳುತ್ತಿದ್ದೇನೆ. ಸಹಕಾರ ಕ್ಷೇತ್ರದಲ್ಲಿ ಇರುವ ದೋಷಗಳು ಏನೇ ಇರಲಿ ಆದರಿಂದ ಸಹಸ್ರಾರು ರೈತರಿಗೆ ಪ್ರಯೋಜವಾಗುತ್ತಿದೆ ಎಂದು ಹೇಳುವುದರಲ್ಲಿ ಸಂಶಯವಿಲ್ಲ. ನಾನು ಈ ಮನೆಯಲ್ಲಿ ಬಹಳ ಹೊತ್ತು ಮಾತನಾಡಿದ್ದೇನೆ. ಆದುದರಿಂದ ಈ ಮಾನ್ಯ ಸಭೆಯ ಸದಸ್ಯರಿಗೆ ನಾನು ಬಹಳ ಕೃತಜ್ಞನಾಗಿದ್ದೇನೆ. ಈ ಸಲ ಯಾವ ರೀತಿಯಾಗಿಯೂ ಕಟುವಾದಂಥ ಟೀಕೆ ಬರಲಿಲ್ಲ. ಕೆಲವೊಂದು ಉಪಯುಕ್ತವಾದಂಥ ಸೂಚನೆಗಳನ್ನು ಕೊಟ್ಟಿದ್ದಾರೆ. ಇದೇ ರೀತಿಯಾಗಿ ಇನ್ನು ಮುಂದೆ ಡಿಮ್ಯಾಂಡ್‌ಗಳು ಬಂದಾಗಲೂ ಕೂಡ ಸಹಕರಿಸುತ್ತಾರೆಂದು ನಾನು ಆಶೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The members have laboured much. Tomorrow they are going to observe "Mahashivarathri". We are meeting again on Monday next. The House will now rise and meet again on next Monday at 1 P.M.

The House adjourned at Eight Minutes past Eight of the Clock to meet again at One of the Clock on Monday the 9th March 1970.